
ಕೊರವಂಜಿ



KORAVANJI
Kannada Monthly

ಸಂಪಾದಕರು:

ಶ್ರೀ॥ ರಾ. ಶಿ.

ಬರೆಹಗಾರರು:

ಶ್ರೀ॥ ಎಸ್. ಎನ್. ಆನಂದ
ಶ್ರೀ॥ [illegible]ಮಾರ್
ಶ್ರೀ॥ [illegible] ಮೂರ್ತಿ
ಶ್ರೀ॥ [illegible] ರಾ.
ಶ್ರೀ॥ ಪ್ರಸಾದ್
ಶ್ರೀ॥ ಅ. ರಾ. ಸೇ.
ಶ್ರೀ॥ ದಾಶರಥಿದೀಕ್ಷಿತ್

ಇತ್ಯಾದಿ ಇತ್ಯಾದಿ.

ಮಾರ್ಚಿ

೧೯೬೬

ತಿಳಿನಗೆಯ ಮಾಸಪತ್ರಿಕೆ

ವಿದ್ಯುಚ್ಛಕ್ತಿಯ ಮಿತವ್ಯಯಕ್ಕೆ

ಹಾಗೂ

ಪ್ರಕಾಶಮಾನವಾಗಿರುವುದಕ್ಕೆ

★

ಬೆಂಗಾಲ್ ಬಲ್ಬುಗಳು

★

ಬೆಂಗಾಲ್ ಎಲೆಕ್ಟ್ರಿಕಲ್ಸ್, ಬೆಂಗಳೂರು-೩

Koravanji, March 1966


For 3 way Beauty Treatment....
RAJA
SNOW
AMLA HAIR OIL , KASTURI SOAP
MANYAM & CO. BANGALORE MADRAS MADURAI BOMBAY.



ಕೊರವಂಜಿ

A ANANTHIAH

ಸಂಪುಟ ೨೪] ಮಾರ್ಚಿ ೧೯೬೬ [ಸಂಚಿಕೆ ೧೨

ಕುಹಕಿಡಿಗಳು

ವಿಡಂಬನೆಯ ಮೇಲೆ ಪ್ರೌಢ ವಿಮರ್ಶಾ ಗ್ರಂಥವನ್ನೂ ಹಾಗೂ ರಂಗ ಬಿನ್ನಪವನ್ನೂ ಬರೆದ ಶ್ರೀಯುತ ರಂಗಣ್ಣನವರಿಗೆ ಅಕಡಮಿಾ ಪ್ರಶಸ್ತಿ ದೊರೆತುದಕ್ಕೆ ಕೊರವಂಜಿಯು ಹಿರಿಹಿಗ್ಗುತ್ತಾಳೆ.

* * * *

ಎಂಕ್ರೂಮ ಅವರು ಪೀಕಿಂಗ್‌ಗೆ ವೈಭವದಿಂದ ಬಂದರಂತೆ.

—ಅದೇ ಸಮಯದಲ್ಲಿ ಘಾನದಲ್ಲಿ ಅವರಿಗೆ "ಕೊಕ್ಕು" ಕೊಟ್ಟರಂತೆ-

* * * *

ಹಾನಾಯ್‌ಯಲ್ಲಿ ಈಗ ಕನ್ನಡದ ಗಾದೆ ಬಳಕೆಗೆ ಬಂದಿದೆಯಂತೆ

—"ನೀತಿ ಹೇಳುಕ್ಕೆ ಎಂಕ್ರೂಮ ಕರೆಸಿದರೆ, ಆತ ಊರಂ ಕಳೆದುಕೊಂಡಂ ಆರು ದಿನ ಆಯ್ತು."—

* * * *

ಉದ್ಯೋಗಸ್ಥ ಕನ್ಯೆಯರಿಗೆ ಕತೆ ಕಾದಂಬರಿಗಳಲ್ಲಿ ತುಂಬಾ ಆಸಕ್ತಿಯಂತೆ.

—ಮದುವೆಯಾದವರಿಗೆ ಗಂಡಂದಿರು ಹೇಳುವ ಕತೆಗಳೇ ಸಾಕುಮಾಡುತ್ತವೆ.

* * * *

ಪಶ್ಚಿಮ ಬಂಗಾಳದ ವಿಧಾನ ಸಭೆಯಲ್ಲಿ ಸದಸ್ಯರು ಗುದ್ದಾಡಿದರಂತೆ.

—ತಾಷ್ಕಂಟ್ ಗಾಳಿ ಅಲ್ಲಿನ್ನೂ ಬೀಸಿಲ್ಲ ಅಂತ ಖಂಡಿತವಾಯಿತು.

* * * *

ಕನ್ನಡಿ ಚೂರುಗಳನ್ನು ಮೆಟ್ಟಿದ ಲಂಗ ಹಾಕಿಕೊಂಡು, ಸಿನಿಮಾ ತಾರೆಯೊಬ್ಬಳು ಕುಣಿಯುತ್ತಾಳಂತೆ.

—ಮಿರು ಮಿರುಗುವೆ ಹಾ! ಕಿರು ತಾರಗೆಯೆ!

* * * *

ಕೇರಳದಲ್ಲಿ ಈಗ ಭಿಕ್ಷದವರಿಗೆ ಹಿಡಿ ಅಕ್ಕಿ ಹಾಕುತ್ತಿದ್ದಾರಂತೆ.

—ಮೊದಲಿನ ಹಾಗೆ ಪೈಸೆ ಕೊಟ್ಟು ಕಳಿಸುವುದಿಲ್ಲವಲ್ಲ!!

* * * *

ಮೊರಾರ್ಜಿಯವರಿಗೆ ಭಾರತರತ್ನದ ಸಮನಾಗಿ ೯ನೇ ಸ್ಥಾನವನ್ನು ನಿಗದಿ ಮಾಡಿದರಂತೆ.

—ಈಗ ಮೊರಾರ್ಜಿಯವರು, ಅಂತಸ್ತು ಗಿಂತಸ್ತು ನನಗೆ ಬೇಡ, ನನ್ನ ಸಮಿತಿಯ ಕೆಲಸಕ್ಕೆ ಅನುಕೂಲ ಮಾಡಿಕೊಡಿ ಎಂದು ಅಂದರಂತೆ.

ಅಂತಸ್ತಿನ ತಾಪತ್ರಯ ಈಗ ಯಾಕೆ? ಇನ್ನೊಂದು ವರ್ಷದಲ್ಲಿ ತಿರುಗಿ ಕುಸ್ತಿ ನಡೆಯುತ್ತಲ್ಲ!!

* * * *

ಸಂಬಳ ಹೆಚ್ಚುಮಾಡಿ ಅಂತ ಸರ್ಕಾರದ ನೌಕರರು ಕೇಳಿಕೊಳ್ಳುತ್ತಾರಲ್ಲಾ, ಅದರ ಬದಲು, ಸ್ವಂತ ಸಂಪಾದನೆಗೆ ಕಾನೂನು ರೀತ್ಯಾ ಅನುಕೂಲ ಮಾಡಿದರೆ ಸರ್ಕಾರಕ್ಕೂ ತೊಂದರೆ ಇಲ್ಲ, ನೌಕರರಿಗೂ ಕಷ್ಟವಿಲ್ಲ ಅಂತ ಒಬ್ಬರ ಅಂಬೋಣ.

—ಸ್ವಾಮಿ! ಸಂಬಳಕ್ಕೆ ತಕ್ಕ ಸಂಪಾದನೆ, ಅದಕ್ಕೇ ಸಂಬಳ ಹೆಚ್ಚಿಸಿ ಅಂತ ಕೇಳೋದು! ಎಂದು ಇನ್ನೊಬ್ಬರ ಅಂಬೋಣ,

* * * *

ಇಂದಿರಾಜೀಯವರು ಒಂಕ್ರೂಮಾ ಜತೆ ಮಾತುಕತೆ ನಡೆಸಿದರು.

ಒಂಕ್ರೂಮ ಜಾರಿಬಿದ್ದ.

ಇಂದಿರಾಜೀಯವರು ನಾಗಾ ಮುಖಂಡರೊಡನೆ ಮಾತನಾಡಿದರು.

ಅವರೂ ಜಾರಿಬಿದ್ದರೆ ಇನ್ನೂ ಚೆನ್ನ.

* * * *

ರಂಗೋಲಿ ಪ್ರದರ್ಶನವನ್ನು ಏರ್ಪಡಿಸಿದ್ದಾಗ, ನೋಡಲು ಬಂದ ಪ್ರೇಕ್ಷಕರು ಹೊಸಿಲ ಮೇಲೆ ನಿಂತು ಕಾಣಿಕೆ ಡಬ್ಬ ಕಂಡು, ಹೊಸಿಲ ಕೆಳಗೆ ನುಸುಳಿದರಂತೆ.

• • ಇದು ಕೇಳಿದ್ದೀರಾ....? • •

ಗಂಡ ಹೆಂಡತಿ ಆಸ್ಪತ್ರೆಗೆ ಹೋದರಂತೆ. ವೈದ್ಯರನ್ನು ಭೇಟಿ ಮಾಡಿದಾಗ ಹೆಂಡತಿ ಎಲ್ಲವನ್ನು ವಿವರಿಸಿದಳಂತೆ. ಗಂಡನಿಗೆ ಏನಾಗಿದೆ, ಎಷ್ಟು ದಿನದಿಂದ. ಹೇಗೆ ಆಡ್ತಾ ಇದ್ದಾರೆ ಅಂತ ಎಲ್ಲಾ, ಚಾಚು ತಪ್ಪದೆ high power transmitter ತರಹ ವಿಶದೀಕರಿಸಿದಳಂತೆ. ಏನೂಮಾಡಲು ತೋಚದ ಡಾಕ್ಟರ್, ಗುಡುಗು, ಸಿಡಿಲು ನಿಂತ ಮೇಲೆ ಶಾಂತವಾಗಿ ಹೇಳಿದರಂತೆ "ನೀವು ಸ್ವಲ್ಪ ಹೊರಗೆ ಹೋಗೀಮ್ಮಾ". ಹೊರಬಂದಳಂತೆ ಹೆಂಡತಿ.

ಸುಮಾರು ೧೦ ನಿಮಿಷವಾದ ಮೇಲೆ ವೈದ್ಯರು ಹೊರಬಂದು ಹೆಂಡತಿಗೆ ಹೇಳಿದರಂತೆ "ಕ್ಷಮಿಸಿ ನಿಮ್ಮ ಯಜಮಾನ್ರು ಮೂಕರು ಅನ್ನೋದು ನನಗೆ ಗೊತ್ತಿರಲಿಲ್ಲ, ಅದಕ್ಕೇ ನಿಮ್ಮನ್ನು ಹೊರಗೆ ಕಳುಹಿಸಿದೆ" ಎಂದರಂತೆ.

ಪತ್ತೇದಾರ ಪುರುಷೋತ್ತಮನ ಹಾಗೆ ಹೆಂಡತಿ ಸ್ತಂಭೀಭೂತಳಾದಳಂತೆ. ಕಾರಣ ಗಂಡ ಮೂಕ ಅನ್ನೋದು ಅಂದೇ ಅವಳಿಗೆ ಗೊತ್ತಾಗಿದ್ದು !

* * * *

ಭರ್ಜರಿ ಪಾಟೀಸವಾಲು ನಡೀತಾ ಇತ್ತು ಕೋರ್ಟಿನಲ್ಲಿ, ಕೊಲೆ ಮೊಕದ್ದಮೆಯ ವಿಚಾರಣೆ. ತರುಣಿಯೊಬ್ಬಳನ್ನು ಕೊಲೆ ಮಾಡಿದನೆಂದು ಒಬ್ಬ ತರುಣನಮೇಲೆ ಆರೋಪ ಹೊರಿಸಿದ್ದಿತು. ಅಪಾದಿತನ ಕಡೆ ಲಾಯರ್ ಏನು ಸಾಮಾನ್ಯರೆ ? ಅವರ ವಾದ ವೈಖರಿ ಅವರನ್ನೇ ಒಮ್ಮೊಮ್ಮೆ ಅನುಮಾನದಲ್ಲಿ ಇರಿಸುತ್ತಿತ್ತು. ಹೇಳುತ್ತಿರುವುದು ಸುಳ್ಳೇ ನಿಜವೇ ಎಂದು.

ಈಗಲೂ ಅಷ್ಟೇ ಪೋಲೀಸನ್ನು ಟೀಕಿಸಿ, ಸಾಕ್ಷವೇ ಇಲ್ಲ, ಇವನು ಅಪಾದಿತ ವನ್ನಲು ಎಂದೆಲ್ಲಾ ಹೇಳಿ, ತಮಿಳು ಸಿನಿಮಾದ ಖಳನಾಯಕನ ಆರೋಪಣಾ ಭಾಷಣದಂತೆ ವಾದಿಸುತ್ತಾ ಒಮ್ಮೆಲೇ ಕೂಗಿದರಂತೆ "ಅದೋ ಆ ತರುಣಿ ಬಂದಳು ಅಲ್ಲಿ" ಎಂದು. ಇಡೀ ಕೋರ್ಟೇ ಬಾಗಿಲಿನ ಬಳಿ ನೋಡಿತಂತೆ. ಆದರೇನೂ ಇರಲಿಲ್ಲ ಅಲ್ಲಿ. ಗಹಿಗಹಿಸಿ ನಗುತ್ತಾ "ಅವಳ ಕೊಲೆ ನಿಮಗೇ ಅನುಮಾನ ನೀವೆಲ್ಲಾ ತಿರುಗಿ ನೋಡಿದ್ದೀರಿ. ಅಂದಮೇಲೆ ಈತ ಕೊಲೆ ಮಾಡೇ ಇಲ್ಲ" ಎಂದರಂತೆ.

ಆದರೇನು, ಅವನಿಗೆ ಶಿಕ್ಷೆಯಾಯಿತಂತೆ. ನಂತರ ಈ ವಕೀಲರು ನ್ಯಾಯಾಧೀಶರನ್ನೇ ಕೇಳಿದರಂತೆ ವಿವರ. ಆಗ ಅವರೆಂದರಂತೆ "ತರುಣಿ ಬಂದಳು ಎಂದು

ಕೂಗಿದರಲ್ಲಾ" ಆಗ ಎಲ್ಲರೂ ನೋಡಿದರು ಬಾಗಿಲಬಳಿ; ಆದರೆ, ಆಪಾದಿತ ಮಾತ್ರ ನೋಡಲಿಲ್ಲ ಆ ಕತೆ ಅದಕ್ಕೆ ಅವನೇ ಕೊಲೆಗಾರ ಎಂದು ನಿರ್ಧರಿಸಿದೆ"


'ಭೇಷ್' ಎಂದರಂತೆ ಲಾಯರು.

*   *   *   *

ಹೊಸ ಹೋಟೆಲೊಂದರಲ್ಲಿ suggestion book ಇಟ್ಟಿದ್ದಕ್ಕೆ ಶಿಕ್ಷೆ ಏನು ಗೊತ್ತೆ? ಮಾಲೀಕರಿಗೆ ಅದರಲ್ಲೊಂದು ಸಲಹೆ "ಸ್ವಾಮಿ Do not spit ಅನ್ನೊ ಬೋರ್ಡ್ basin ಬಳಿ ಇಡುವುದರ ಬದಲು ನಿಮ್ಮ table ಬಳಿ ಇಟ್ಟುಕೊಳ್ಳಿ ಮುಂದಕ್ಕೆ ಅಲ್ಲೇ ಹೆಚ್ಚು ಉಪಯೋಗವಾಗಬಹುದು!"

ಈಗಲ್ಲಿ ಆ ಪುಸ್ತಕವೇ ಇಲ್ಲ.

ಎಸ್. ಎನ್. ಆನಂದ



ಕಡೆಗೂ ಕಾಂಗ್ರೇಸಿನವರು ಟೋಪಿ ಹಾಕಿದರು, ಅಧ್ಯಕ್ಷ ಚುನಾವಣೆಯಲ್ಲಿ

ದೃಷ್ಟಿ ತೆಗೆಸಿಕೊಳ್ಳಲೇನೇ ? ಸಾತಕ್ಕ

ಅಲ್ಲ ಕಣೆ ! ಸಾತಕ್ಕ ! ಅದು ಯಾಕೆ ಹಾಗೆ ದುರುಗುಟ್ಟಿಕೊಂಡು ನೋಡ್ತಿ ! ಆಸ್ಪತ್ರೇಲಿ ನರ್ಸುಗಳು ನೋಡಿದ ಹಾಗೇ ನೋಡ್ತೀಯಲ್ಲೇ !"

"ಏನೂ ಇಲ್ಲ ಕಾವಕ್ಕ ! ನನ್ನ ವಯಸ್ಸು ನಿನಗೆ ! ನನಗೆ ಆಗಲೇ ಜಿಂಕ್‌ಷೀಟ್ ತರಹ ಹಣೆ ಆಗಿದೆ ನಿನ್ನ ಮುಖ ಇನ್ನೂ ಎಳಸಾಗೆ ಇದೆಯಲ್ಲೇ ! ನನ್ನ ಹಾಗೇ ಆರು ಇಳಿದು, ಎಂಟು ಹೆತ್ತೋಳು ನೀನು ! ಅದು ಹ್ಯಾಗಾಯ್ತು ಅಂತ ನೋಡ್ದೆ. ನಾನು ನೋಡೋದು ಸಹಜ. ಆದರೆ ಆಸ್ಪತ್ರೆ ನರ್ಸುಗಳು ಹಾಗ್ಯಾಕೆ ನೋಡಿದರು ?"

"ನೋಡು, ಸಾತಕ್ಕ ಮೊನ್ನೆ ರಂಗಜ್ಜಿ ಮೊಮ್ಮಗಳು ಚೊಚ್ಚಲು ಹೆತ್ತಿದ್ದಳಲ್ಲ ! ಅವಳನ್ನು ನೋಡಿಕೊಂಡು ಬರೋಣ ಅಂತ ಹೆರಿಗೆ ಆಸ್ಪತ್ರೆಗೆ ಹೋದೆ. ಮಡಿ ಮೈಲಿಗೆ ಅಂತ ಪದ್ದ್ಯಾಡೋರು ನಾವು, ಜಟ್ಕಾನೂಬೇಡ, ಆಟೋನೂಬೇಡ ಅಂತ ನಡಕೊಂಡೇ ಹೋದೆ. ಆಸ್ಪತ್ರೆ ಸೇರೋಹೊತ್ತಿಗೆ ಸುಸ್ತುಬಡಿದಿತ್ತು. ಯಾಕೋ ಒಂದು ತರಹ ಹೊಟ್ಟೆನೋವುಕ್ಕೆ ಶುರುವಾಯ್ತು. ಏದುಬ್ಬಸ ಪಡ್ತಿದ್ದ ನನ್ನ ಆಸ್ಪತ್ರೆ ವರಾಂಡಾದಲ್ಲೇ ಕಂಡ ನರ್ಸಮ್ಮ ಒಬ್ಬಳು "ಯಾಕೆ ತಾಯಿ ! ಏನಾಗುತ್ತೆ ಸಂಕಟಾನೇ" ಎಂದು ಕೇಳಿದಳು. "ಹೂಕಣಮ್ಮಾ ಹೊಟ್ಟೆ ಒಂದುತರಹ ಆಗ್ತಿದೆ ಅಂದೆ. "ಬನ್ನಿ ತಾಯಿ ಹೀಗೆ ಬನ್ನಿ" ಅಂತ ಆಕೆ ನನ್ನ ಕರಕೊಂಡು ಒಂದು ಕೊಠಡೀಗೆ ಹೋದಳು. ಅಲ್ಲಿ ಕೂತುಕೋ ಡಾಕ್ಟರು ಬರ್ತಾಳೆ ಅಂತ ಹೇಳಿ ಹೊರಟು ಹೋದಳು. ಆಮೇಲೆ ಬಂದು ಕಡಸಿನ ಹಾಗೆ ಇದ್ದ ಹೆಣ್ಣು ಬಂತು "ನಿಮಗೇನೆ ನೋವು ಬಂದಿರೋದು" ಎಂದು ಕೇಳಿದಳು. ನನ್ನ ಹೊಟ್ಟೇನೆ ದುರುಗುಟ್ಟುಕೊಂಡು ನೋಡಿದಳು. "ಎಷ್ಟು ತಿಂಗಳಾಗಿದೆ" ಅಂತ ಕೇಳಿದಳು.

ನನಗೆ ಕೋಪ ಬಂತು. ಋಷಿ ಪಂಚಮಿ ಮುಗಿಸಿ ಐದು ವರ್ಷ ಆಯಿತು ಈ ಹೆಣ್ಣು ಡಾಕ್ಟರು ಬಂದು ಹೊಟ್ಟೆ ನೋಡಿ ಎಷ್ಟು ತಿಂಗಳು ಅಂತ ಕೇಳ್ತಾಳಲ್ಲ ! ಅಂತ,

"ಅಲ್ಲಾ ಕಣ್ರಿ ನಿಮ್ಮನ್ನ ನೋಡಿದರೆ ಎಂದೂ ಬಸಿರಾದ ಹಾಗೆ ಕಾಣಿಸುಲ್ಲ. ನಿಮಗೆ ಏನು ಗೊತ್ತಾಗುತ್ತೀ ಹೆರಿಗಯ ನೋವು ? ನೋಡುತ್ತಲೂನೂವೇ ನನ್ನ ಬಸಿರು ಅಂತ ಅಂದುಕೊಂಡವರು ನೀವು, ಏನಂತಾನೆ ಡಾಕ್ಟರ ಕೆಲಸ ಮಾಡ್ತೀರೀ ? ಮೊದಲು ಸ್ವಲ್ಪ ಅನುಭವ ಪಡೆದುಕೊಳ್ರಿ" ಅಂತ ದಬಾಯಿಸಿಬಿಟ್ಟು,ಬಾಣಂತೀನೂ ನೋಡಿಕೊಂಡು ಬಂದೆ.

ಆ ನರ್ಸು ಆ ಡಾಕ್ಟರ ತರಹಾನೇ ನೀನೂ ನನ್ನ ದುರುಗುಟ್ಟಿಕೊಂಡು ನೋಡಿದಾಗ, ದೃಷ್ಟಿಬಡಿಯೋ ಹಾಗೆ ಇದೀನೇನೋ ಅಂತ ಅನುಮಾನ ಬಂತು. ದೃಷ್ಟಿ ತೆಗೆಸಿಕೊಳ್ಳಲೇನೇ ! ಸಾತಕ್ಕ"

ನಾಚಿಕೊಳ್ಳದೆ ಇರಬಹುದವ್ವಾ!

●

ಅಶ್ವತ್ಥ ಪ್ರದಕ್ಷಿಣೆ ಹಾಕುಕ್ಕೆ ಶುರುಮಾಡಿದಳು, ನಮ್ಮ ವಿಂಟಿಕಲಾಡಿ ಮೀನಾಕ್ಷಿ. ಆಸ್ಪತ್ರೆಗಳಾಯ್ತು, ಆಪರೇಷನ್ ಆಯ್ತು. ಔಷಧಿಗಳಾಯ್ತು, ಸರಿ! ಕಡೇಗೆ ದೇವರ ಹೆಸರು ಹೇಳಿ ವ್ಯಾಯಾಮ ಮಾಡುಕ್ಕೆ ಶುರುಮಾಡಿದ್ದಾಳೆ, ಇನ್ನುಮೇಲಾದರೂ ಅವಳ ಹಂಬಲ ಕೈಗೂಡುತ್ತೇನೋ ಎಂದು ನಾವೆಲ್ಲ ಅಂದುಕೊಂಡೆವು.

ಬೆಳಗಿನ ಝಾವ ಹಾಲಿನವನು ನಮ್ಮನೆ ಎದುರಿಗೆ ಹಸು ತಂದು, ಕರೆದ ಮೇಲೆ ಎಬ್ಬಿಸುತ್ತಾನಲ್ಲ. ಆ ಹೊತ್ತಿಗೆ ಮೀನಾಕ್ಷಿ ಹೂವು ಹಣ್ಣನ್ನ ತಟ್ಟೇಲಿಟ್ಟುಕೊಂಡು ಅಶ್ವತ್ಥಕಟ್ಟೆಗೆ ನಡೆದು ಹೋಗುತ್ತಿದ್ದಳು. ಎಂಟು ಹತ್ತು ದಿವಸ ಆ ವರಾರದಲ್ಲಿ ಇರೋರೆಲ್ಲ ನೋಡಿದೆವು. ವ್ರತ ಹಿಡಿದವರ ಹಾಗೆ, ತಪ್ಪದೆ ಹೋಗ್ತಾ ಇದ್ದಳು

ಏಳೆಂಟು ವರ್ಷಗಳ ಹಿಂದೆ ನಾನೂ ಅಶ್ವತ್ಥಕಟ್ಟೆಗೆ ಹೋಗ್ತಿದ್ದೆ. ಅಶ್ವತ್ಥ ಪ್ರದಕ್ಷಿಣೆ ಹಾಕುಕ್ಕಲ್ಲ. ಅಶ್ವತ್ಥಕಟ್ಟೆ ಮೇಲೆ ನಾಗರ ಪ್ರತಿಷ್ಠೆ ಮಾಡಿಲ್ಲವೇ? ಆ ನಾಗರಿಗೆ ಹರಕೆ ಒಪ್ಪಿಸುಕ್ಕೆ. ನಮ್ಮ ಯಜಮಾನರಿಗೆ ಮೈ ಜಡ್ಡಾಗಿತ್ತು ಅಗ್ನಿ ಸರ್ಪ ಕಾಣಿಸಿಕೊಂಡ್ತು. ಆಗ ನಮ್ಮತ್ತೆ ನಾಗರಕಲ್ಲಿಗೆ ತನಿ ಎರೀತೀನಿ, ಮಗನಿಗೆ ನೋವು ಕಡಿಮೆ ಆಗಲಿ ಅಂತ ಹರಸಿಕೊಂಡಿದ್ದರು. ಅದಕ್ಕೋಸ್ಕರ ಹೋಗ್ತಿದ್ದೆ.

ಐದು ಹೆಡೆ ನಾಗರಾಜನ ಪ್ರತಿಮೆ ಎತ್ತರವಾಗಿ ನಿಂತಿತ್ತು. ಎರಡು ಚೊಂಬು ನೀರು ಬೇಕಾಗ್ತಿತ್ತು, ಅದಕ್ಕೆ ಅಭಿಷೇಕಮಾಡಲು. ಎಡ ಬಲ ಪಕ್ಕದಲ್ಲಿ ನಾಗಕನ್ಯೆಯರ ಪ್ರತಿಮೆ ಕೆತ್ತಿದ ಕಲ್ಲು, ಬೇಲೂರಿನ ಶಿಲಾಬಾಲಿಕೆಯರ ತರಹವೇ, ಸೊಂಟದಿಂದ ಮೇಲಕ್ಕೆ ಮಜಭೂತಾಗಿ ಬೆಳೆದಿದ್ದ ವಿಗ್ರಹಗಳು. ಸೊಂಟದಿಂದ ಕೆಳಕ್ಕೆ ಹಾವಿನ ಹಗ್ಗದ ದೇಹ. ನಾಗಕನ್ಯೆಯರಿಗೆ ಅಭಿಷೇಕಮಾಡಲು ಎರಡೆರಡು ಚೊಂಬು ನೀರು ಬೇಕಾಗುತ್ತಿತ್ತು. ಅಭಿಷೇಕ ಮಾಡಿ ಕುಂಕುಮ ಅರಿಸಿನ ಹಚ್ಚುವಾಗ "ಶಿಲ್ಪಿ, ಎಷ್ಟು ಸೊಂಪಾಗಿ ನಾಗಕನ್ಯೆಯರ ವಕ್ಷಸ್ಥಳವನ್ನು ಕಡೆದಿದ್ದಾನೆ? ಹೆಂಗಸರೆಲ್ಲರಿಗೂ ಹೀಗೆ ಇರಬಾರದೆ" ಎಂದು ನಾನು ಅಸೂಯೆಯಿಂದ ಅಂದುಕೊಂಡಿದ್ದೂ ಉಂಟು. ಹಾಗೆ ಅರಿಶಿನ ಕುಂಕುಮ ಗಂಧ ಹಚ್ಚುವಾಗ, ಯಾರಾದರೂ ಗಂಡಸರು ನನ್ನ ಕಡೆ ನೋಡಿದರೆ ಏನೋ ಒಂದು ತರಹ ನಾಚಿಕೆಯೂ ಆಗುತ್ತಿತ್ತು.

ಮೀನಾಕ್ಷಿ ಅಶ್ವತ್ಥ ಪ್ರದಕ್ಷಿಣೆಮಾಡಿ ಯಶಸ್ವಿಯಾಗಲಿ, ನಾಗಕನ್ಯೆಯರ ತರ ಹವೇ ಅವಳ ಎದೆಯೂ ತುಂಬಿಬರಲಿ, ಎಂದು ನಾನೂ ಹರಸಿದೆ.

ಕೆಲವು ದಿನಗಳಾದ ಮೇಲೆ ಮೀನಾಕ್ಷಿಯ ಮನೆಗೆ ಹೋಗಬೇಕಾಗಿ ಬಂತು. ನಮ್ಮನೆ ಹಾಲಿನವನು ಚಕ್ಕರ್ ಕೊಟ್ಟ. ಮೀನಾಕ್ಷಿ ಗಂಡ ಯಾವುದೋ ಡೈರಿಯಿಂದ ಹಾಲು ತರಿಸುತ್ತಿದ್ದರು. ಅವರ ಶಿಫಾರ್ಸು ಪಡೆದು ಡೈರಿಯಿಂದ ನಾನೂ ಹಾಲು ತರಿಸೋದು ಒಳ್ಳೆಯದು ಅಂತ ಅವಳ ಮನೆಗೆ ಹೋದೆ.

ಉಲ್ಲನ್ ಉಂಡೆ ಇಟ್ಟುಕೊಂಡು, ಎರಡು ಕಡ್ಡಿಗಳನ್ನು ಹಿಡಿದು ಮೀನಾಕ್ಷಿ ಏನನ್ನೋ ಹಾಕ್ತಾ ಇದ್ದಳು ಕೂಸು ಹುಟ್ಟುಕ್ಕೆ ಮುಂಚೆ ಕುಲಾವಿ ಹಾಕ್ತಾಳೇನೋ? ಹಾಗೆ ಮಾಡಕೂಡದಲ್ಲ ಅಂತ ಅಂದುಕೊಂಡೆ. ಗಂಡನಿಗೆ ಹೇಳಿ ಡೈರಿಯಿಂದ ಹಾಲು ತರಿಸಿಕೊಡ್ತೀನಿ ಅಂತ ಹೇಳಿದಳು. ಆ ಸಮಾಚಾರ ಈ ಸಮಾಚಾರ ಮಾತಾಡ್ತಾ "ಬಲು ಸೊಗಸಾಗಿದೆ ಈ ಉಲ್ಲನ್ ನೂಲು, ಗಂಡನಿಗೆ ಸ್ವೆಟರ್ ಹಾಕ್ತಾ ಇದೀಯಾ? ಅಥವಾ ನಿನಗೇ ಹಾಕ್ಕೊತ್ತಾ ಇದೀಯಾ? ಅಥವಾ ಇನ್ನೇನಾದರೂ..." ಅಂತ ರಾಗ ತೆಗೆದೆ. ಮೀನಾಕ್ಷಿ ನನ್ನ ನೋಡಿ ತುಸು ನಕ್ಕಳು. "ಮುಂದಿನ ವಾರ ಉತ್ತರ ಹೇಳ್ತೀನಿ ನನ್ನ ಜತೆಗೆ ಅಶ್ವತ್ಥಕಟ್ಟೇಗೆ ಬಂದರೆ?" ಎಂದಳು.

"ಅದಕ್ಕೇನಮ್ಮ ಆಗಲಿ" ಅಂತ ಹೇಳಿ ಕುಂಕುಮ ಇಟ್ಟುಕೊಂಡು ಹಿಂತಿರುಗಿ ಮನೆಗೆ ಬಂದೆ.

ಒಂದು ವಾರ ಆಗಿರಬೇಕು. ಡೈರಿಯವನು ನಮ್ಮನೆಗೆ ಸಂಜೆ ಹಾಲು ತಂದು ಕೊಟ್ಟಾಗ, "ಮೀನಾಕ್ಷಮ್ಮನವರು ನಾಳೆ ಮುಂಜಾನೆ ಅಶ್ವತ್ಥ ಕಟ್ಟೇಗೆ ಹೋಗೋವಾಗ ನಿಮ್ಮನೆ ಮುಂದೇನೆ ಹೋಗ್ತಾವರಂತೆ. ನೀವೂ "ರೆಡಿ"ಯಾಗಿದ್ರೆ ಇಬ್ಬರೂ ಹೋಗಬಹುದಂತೆ" ಅಂತ ಸುದ್ದಿ ತಿಳಿಸಿ, ನೆನಪು ಕೊಟ್ಟ.

ನನಗೂ ಕುತೂಹಲ ಕೂಸಿಗೆ ಕುಲಾವಿ ಹಾಕದ್ದಾಳೆಯೋ? ಇಲ್ಲವೇ? ತಿಳಿದುಕೊಳ್ಳಬೇಕು ಅಂತ ಬೆಳಗಿನ ಝಾಮ, ಸ್ನಾನಮಾಡಿ ನಾನೂ ಕಾದಿದ್ದ ಮೀನಾಕ್ಷಿ ಬಂದ ಕೂಡಲೆ ಅವಳ ಜತೆ ಸೇರಿಕೊಂಡು ಅಶ್ವತ್ಥ ಕಟ್ಟೆಗೆ ಹೋದೆ. ಮೀನಾಕ್ಷಿ ಪ್ರದಕ್ಷಿಣೆ ಹಾಕಿ ಮುಗಿಸಿದಾಗ ಬೆಳಗಿನ ಝಾಮ ಮುಗಿದು ಕಣ್ಣಬೆಳಕಾಗಿತ್ತು. ಆಮೇಲೆ ಮೀನಾಕ್ಷಿ ತನ್ನ ಬುಟ್ಟಿಯಿಂದ ಎರಡು ಸ್ವೆಟರುಗಳನ್ನು ತೆಗೆದಳು.

"ಅವತ್ತು ಕೇಳಿದೆಯಲ್ಲಾ! ಯಾರಿಗೆ ಸ್ವೆಟರ್ ಅಂತ, ಈಗ ಉತ್ತರ ಸಿಗುತ್ತೆ" ಅಂತ ನನಗೆ ಹೇಳುತ್ತಾ ಒಂದೊಂದು ಸ್ವೆಟರನ್ನೂ ಆ ನಾಗಕನ್ಯೆಯರ ಪ್ರತಿಮೆಗಳಿಗೆ ರವಿಕೆ ತೊಡಿಸಿದ ಹಾಗೆ ತೊಡಿಸಿದಳು

"ಗಂಡಸರು ಮಕ್ಕಳು ಎಲ್ಲಾ ಬರ್ತಾರೆ. ಅವರೆದುರಿಗೆ ಇವು ಇಷ್ಟು ಮುಂದೆ ಚಾಚಿಕೊಂಡು ನಿಲ್ಲೋದು ಅವಮಾನ ಕಣೆ! ಅದಕ್ಕೇ ಸ್ವೆಟರ್ ಹಾಕಿದೆ. ಇನ್ನು ಮೇಲೆ ಇಲ್ಲಿಗೆ ನಾಚಿಕೊಳ್ಳದೆ ಬರಬಹುದಮ್ಮಾ" ಎಂದಳು.

ಮಕ್ಕಳಾಗದ ಇರುವ ಮಹಿಳೆಯರ ಮನಸ್ಸೇ ಒಂದು ತರಹ ಅನ್ನಿಸಿತು.

—ರಾಣಿ.

ಹೌಸಟ್ !

ಮೂರು ಬಾಲ್ ಬೌಲ್ ಮಾಡಿರಬೇಕು, ಬೌಲರ್ ಮಹಾಶಯ. ನಾಲ್ಕನೇ ಬಾಲ್ ಬೌಲ್ ಮಾಡುವುದಕ್ಕೆ ಮುಂಚೆ ಒಮ್ಮೆ ಅಂಪೈರ ಕಡೆ ದೃಷ್ಟಿಹಾಯಿಸಿದ. ಅಂಪೈರ್ ಕಣ್ಣು ಮಿಟಕಿಸಿದ ಹಾಗಾಯ್ತು. ಬೌಲ್ ಮಾಡಿದ ಇನ್ನೂ ಆಟಗಾರನ ಹತ್ತಿರಕ್ಕೆ ಬಾಲ್ ಹೋಗಿಲ್ಲ, ಅಷ್ಟರಲ್ಲೇ ಹೌಸಟ್ ಅಂತ ಬೊಬ್ಬೆ ಎಬ್ಬಿಸಿದ. ಬೌಲರ್.

ಆವೇಳೆಗೆ ಬಾಲ್ ಆಟಗಾರನ ಕಾಲಿಗೆ ತಾಕಿತು. ತಾಕದೆ ಇದ್ದಿದ್ದರೆ ವಿಕೆಟ್ಟಿಗೆ ಎರಡು ಅಡಿ ದೂರದಲ್ಲಿ ಬೌಂಡರಿಯತ್ತ ಹೋಗುತ್ತಿತ್ತು. ಆಟಗಾರ ಮುಂದಿನ ಬಾಲ್ ಆಡಲು ಸಿದ್ಧಮಾಡಿಕೊಳ್ಳುತ್ತಿದ್ದ. ಆದರೆ ಅಂಪೈರ್ ಬೆರಳೆತ್ತಿದ್ದ. ಎಲ್ ಬಿಡಬಳ್ಯು ಅನ್ನುವ ಸಂಕೇತ. ತಲೆ ಕೊಡವಿಕೊಂಡು ನಮ್ಮ ಆಟಗಾರ ಹಿಂತಿರುಗಿದ.

*　　*　　*　　*

"ಅಂಪೈರ್‌ಗೆ ಬೌಲರ್ ಎಷ್ಟು ಕೊಟ್ಟಿರಬಹುದು ಅಂತಿ" ಎಂದು ಪ್ರೇಕ್ಷಕನೊಬ್ಬ ಇನ್ನೊಬ್ಬನ್ನ ಕೇಳಿದ. "ಛೇ ! ಛೇ ! ಬೌಲರ್ ಕಡು ಬಡವ, ಅವನೇನು ಕೊಟ್ಟಾನು ?" ಎಂದ ತಿಳಿದವ. "ಮತ್ತೆ ಅಂಪೈರ್ ಹೀಗೆ ರಾಜಾರೋಷವಾಗಿ ಸುಳ್ಳು ಹೇಳಿ ಔಟ್ ಅಂದನಲ್ಲ, ಕಾರಣ ಇಲ್ಲದೆ, ಕೈ ಬೆಚ್ಚಗಾಗದೆ ಅವ ಹೀಗೆ ಮಾಡೋನಾ" ಎಂದ ಮೊದಲಿಗ. "ಕೈ ಬೆಚ್ಚಗಾಗಿರಬೇಕು. ಐನೂರಾದರೂ ಬಿದ್ದಿರಬೇಕು, ಆದರೆ ನಾ ಮೊದಲು ಹೇಳಿದಹಾಗೆ ಬೌಲರ್ ಕೊಟ್ಟಿಲ್ಲ." ಎಂದ ಮೊದಲಿನ ಪ್ರೇಕ್ಷಕ. "ಮತ್ತೆ ಯಾರು ಕೊಟ್ಟಿರಬೇಕು" ಎಂದ ಎರಡನೆಯವ

"ಕಾಂಗ್ರೆಸಿನಲ್ಲಿ ಇಲೆಕ್ಷನ್ ಫಂಡ್ ಅಂತ ಇಲ್ಲವೇ ? ಹುತ್ತ ಬೆಳೆದಹಾಗೆ ಅದರಲ್ಲಿ ಹಣ ಬೆಳೆದಿಲ್ವೇ ! ಹಾಗೆ ಆ ರಾಜ್ಯದ ಕ್ರಿಕೆಟ್ ಫಂಡ್ ಅಮೋಘವಾಗಿ ಬೆಳೆದಿದೆ. ಅದರಿಂದ ಅಂಪೈರುಗಳಿಗೆ ಬಟವಾಡೆ ಮಾಡುತ್ತಾರೆ" ಎಂದು ತಿಳಿದವ ಹೇಳಿದ.

*　　*　　*　　*

ನಾನು ನಂಬಲಿಲ್ಲ. ಎಲ್ಲಾದರೂ ಉಂಟೆ ಆಡೋದು ಕ್ರಿಕೆಟ್, ಅಂತಹದರಲ್ಲಿ ಅನಾಚಾರ ಮಾಡ್ತಾರೆಯೇ ? ಇದೇನು ಚುನಾವಣೆ ಕೆಟ್ಟು ಹೋಯಿತೆ ? ನಮ್ಮೂರಿನವರ ಬಾಯಿಗೆ ಅಡಿ ತಡೆಯುಂಟೆ ಎಂದುಕೊಂಡೆ.

ಆಟ ಮುಗಿಯಿತು. ಆ ರಾಜ್ಯದವರು ಗೆದ್ದರು. ಆದರೆ ಅದೇನು ಮೋಜು ಅಂತೀರಿ ? ಗೆದ್ದ ಪಂಗಡದ ಕ್ಯಾಪ್ಟನ್ನೋ, ತುಂಬಾ ರನ್ ಹೊಡೆದವನೋ, ಚೆನ್ನಾಗಿ ಬೌಲ್ ಮಾಡಿದವನೋ ಮುಂದೆ ನಡೆಯಬೇಕಲ್ಲ ! ಉಹ್ಞು. ಹಾಗಾಗಲಿಲ್ಲ ಆ ಅಂಪೈರ್ ಮುಂದೆ ನಡೆದು ಬಂದ. ಅವನ ಹಿಂದೆ ಕುರಿಗಳ ಹಾಗೆ ಗೆದ್ದ ಟೀಮು.

ಫೋಟೊ ತೆಗೆಸಿಕೊಳ್ಳಕ್ಕೆ ಗೆದ್ದ ಟೀಮು ಕೂತಿತು ಮಧ್ಯದ ಕುರ್ಚಿಯಲ್ಲಿ ಯಾರು ಕುಳಿತರು ಗೊತ್ತೆ ? ಗಿಂಡಾಯಿನಮಃ ಅಂತ ಗೆಲುವು ಮೂಡಿಸಿಕೊಟ್ಟ ಅಂಪೈರ್ !

ಆಗರ್ಥವಾಯಿತು, ಪ್ರೇಕ್ಷಕರು ಹೇಳಿದ್ದು ನಿಜ. ಕ್ರಿಕೆಟ್ ಚುನಾವಣೆ ಮಟ್ಟಕ್ಕೆ ಇಳಿಯಿತು. ವೋಟು ಗಿಟ್ಟಿಸಿದಹಾಗೆ ವಿಕೆಟ್ ಗಿಟ್ಟಿಸಬಹುದು. ಹಣ ಚೆಲ್ಲಿದಷ್ಟು ರನ್ ಗಳಿಸಬಹುದು.

ನಮ್ಮ ಟೀಮಿನವರು ಬೌಲಿಂಗ್ ಬ್ಯಾಟಿಂಗ್ ಫೀಲ್ಡಿಂಗ್ ಮಾತ್ರ ಕಲಿತರೆ ಭವಿಷ್ಯ ಮಂಕೇ ಮಂಕು. ಜತೆಗೆ ಅಂಪೈರನ್ನು ಒಗ್ಗಿಸಿಕೊಳ್ಳಬೇಕು. ಬೆಳಸಿಕೊಳ್ಳ ಬೇಕು.

ಹೌಸಟ್ ಅಂತ ಕೂಗಿದರೆ ಅವ ಬೆರಳೆತ್ತಬೇಕು !

—**ಕುಮಾರ್**

ಶಾಲೇಲೊಮ್ಮೆ ಪಾಠದ ಹೊತ್ನಲ್
ಕುದುರೆ ಕೆನೆದ್ಹಾಗಾಯ್ತು
ಮೇಷ್ಟ್ರು ಹುಡುಗರು ಒಬ್ಬರನ್ನೊಬ್ಬರು
ನೋಡ್ತಾ ನಿಂತುಕೊಂಡರು
ಆಗೊಬ್ಬ ಚಿಕ್ಕ ಹುಡುಗ
ಹೇಳೇಬಿಟ್ಟ
ಹಯವದನ ಆಕಳಿಸ್ದ
ಅಷ್ಟೇ ಸಾರ್ ಅಂತ.

* * * *

★ ★ ರಾಜಕಾರಣಿ ಸಿದ್ಧ ★ ★

(ರತ್ನ ಅವರಲ್ಲಿ ಕ್ಷಮೆಯಾಚಿಸಿ)

ಲಂಚ ರುಶ್‌ವತ್ ಸುಳ್ಳಿನ್ ಪದ್ಗಳ್
ಅಂದ್ರೆ ಸಿದ್ಧಂಗ್ ಪ್ರಾಣ
ವೇದ್ಕೆ ಹತ್ತಿ ನಿಂತ್ಬಿಟ್ಟಾಂದ್ರೆ
ತಕೊಣ್ಕೀ ಸುಳ್ಳಿನ್ ಬಾಣ
ಭಗವಂತ್ ಏನ್ರ ಭೂಮಿಗ್ ಇಳ್ದ್ರ
ನನ್ ತಾಕ್ ಬರ್‍ತಾನಾಂದ್ರೆ
ಪರಿಗಿರೀಕ್ಸೆ ಮಾಡ್ತಾನಾಂದ್ರೆ
ನನ್ ಸುಳ್ ಎಣ್ಸೊ ಕಾಗೋಕಿಲ್ಲ.
ಲಂಚ ನೀನು ಬುಟ್‌ಬುಡ್ ಸಿದ್ಧ
ಅಂತ ಔನ್ ಏನಾರ್ ಅಂದ್ರೆ
ಬಾಯಿಂ ತುಂಬ "ಆಗ್ಲಿ" ಅಂತೀನ್
ಆದ್ರೆ ಮಾತ್ರ ನಡ್ಸಾಕಿಲ್ಲ
ಲಂಚ ಬಿಟ್ಟೆ ಕಳ್ತನ ಬಿಡ್
ಅಂತ ಔನ್ ಏನಾರ್ ಅಂದ್ರೆ
ಬುಟ್‌ಬುಟ್ಟೆ ಅಂತ ಕುಣಿದಾಡ್ತೀನಿ
ಆದ್ರೆ ಮಾತ್ರ ನಡ್ಸಾಕಿಲ್ಲ.
ಆಗ್ನೆ ಮಾಡೋ ಐಯ್ಗೊಳೆಲ್ಲಾ
ದೇವ್ರೆ ಆಗ್ಲಿ — ಎಲ್ಲಾ
ಸುಳ್ಳಿನ್ ಸುದ್ದಿ ಕೆದಕಾಕ್‌ಬಂದ್ರೆ
ಮಾನ ಉಳ್ಸಾಕಿಲ್ಲ.
ನರಕಕ್ ಇಳ್ಸಿ ನಾಲ್ಗೆ ಸೀಳ್ಸಿ
ಬಾಯ್ ಒಲ್ಸಾಕಿದ್ರೂ
ಮೂಗ್ನಲ್ಲಿ ಸುಳ್ಳ ಹೇಳ್ತಿರ್ತೀನಿ
ಸತ್ಯ ಅಂತ್ಲೇ ಸಾರ್ತೀನಿ,
ಲಂಚ ಇರ್ಲಿ ರುಶ್‌ವತ್ ಇರ್ಲಿ
ತ್ಯಾಗಿಗಳೆಲ್ಲ ಕೊಚ್ಕೊಂಡ್ ಹೋಗ್ಲಿ
ಸಿದ್ಧ ಇರೋ ತನ್ಕ ಮಾತ್ರ
ಸುಳ್ಳಿನ್ ಪದ್ಕೆ ಜಯವೇ ಸೈ.

—ಕಾರ.

ಹೆಸರಿನಲ್ಲೇನಿದೆ ?

ತಾತ ಹೇಳುತ್ತಿದ್ದರು

ರೆಕ್ಕೆಯಿಲ್ಲ ಪುಕ್ಕ ಇಲ್ಲ ಗರುಡೈಂಗಾರಿ,
ಅಂದ ಇಲ್ಲ ಚಂದ ಇಲ್ಲ ಚಲುವೈಂಗಾರಿ,
ದುಡ್ಡಿಲ್ಲ ಕಾಸಿಲ್ಲ ಸಂಪತ್ತೈಂಗಾರಿ !

ಅಂದರೆ, ಹೆಸರಿಗೆ ತಕ್ಕ ಗುಣ ಇರಬೇಕು, ಇಲ್ಲದಿದ್ದರೆ ನಗೆಪಾಟಲು ಎಂದು.

ಒಂದಾನೊಂದು ಕಾಲವಿತ್ತು. ಹುಟ್ಟಿದ ಮಕ್ಕಳಿಗೆ, ಯೋಚಿಸಿ ಆರಿಸಿ ಹೆಸರಿಡುತ್ತಿದ್ದರು. ಹೆಣ್ಣುಮಕ್ಕಳಿಗೆ ಸೀತೆ, ಸಾವಿತ್ರಿ, ದಮಯಂತಿ, ಲಕ್ಷ್ಮಿ, ಸರಸ್ವತಿ, ಪಾರ್ವತಿ...! ಗಂಡು ಮಕ್ಕಳಿಗೆ ರಾಮ, ಕೃಷ್ಣ, ಗೋವಿಂದ, ಗೋಪಾಲ. ಮಾಧವ.. ! ಆ ಮಕ್ಕಳು ದೊಡ್ಡವರಾದಮೇಲೆ ತಮಗಿಟ್ಟ ಹೆಸರಿಗೆ ಮರ್ಯಾದೆ ತಂದರು.

ಆದರೆ ಬರುಬರುತ್ತ ಅದು ವ್ಯತಿರಿಕ್ತವಾಯಿತು. ಸೀತೆಯರು ರಾವಣಾಸುರನರಮನೆಯಲ್ಲೇ ಶಾಶ್ವತವಾಗಿ ನೆಲೆಸಿಬಿಟ್ಟರು ಸಾವಿತ್ರಿಯರು ಗಂಡ ಹೋದರೆ ಪೀಡೆ ಕಳಿಯಿತೆಂದು, ಅವನಿಟ್ಟುಹೋದ ಆಸ್ತಿಯನ್ನು ಹಾಯವಾಗಿ ಉಂಡರು ! ಲಕ್ಷ್ಮಿಗೆ ಕೈನಲ್ಲಿ ಕಾಸೇ ಇಲ್ಲವಾಯಿತು ; ಸರಸ್ವತಿ ಮೂರನೇ ಕ್ಲಾಸಿಂದ ಮೇಲಕ್ಕೆರಲೇ ಇಲ್ಲ ! ದಮಯಂತಿ ಸಂದೇಶವೆಲ್ಲ ಅತ್ತೆಯಮೇಲಿನ ದೂರನ್ನು ಅಮ್ಮನಿಗೆ ಅಂಚೆಯಲ್ಲಿ ಕಳಿಸುವುದೇ ಆಯಿತು ; ಊರ್ಮಿಳೆ ಫಾರಿನ್ನಿಗೆ ಹೋದ ಗಂಡ ಅಲ್ಲಿನ ಹೋಟಲ ತಟ್ಟೆ ತೊಳೆಯುವಾಕೆಯನ್ನು ಮೆಚ್ಚಿ ಮದುವೆಯಾಗಿ ಮುಚ್ಚಟೆಯಾಗಿ ಸಂಸಾರ ಹೂಡಿದನೆನ್ನುವ ಸುದ್ದಿ ಕೇಳಿ, ಸ್ಕೂಲ್ ಮೇಡಂ ಆಗಬೇಕಾಯಿತು !

ಗಂಡಸರೂ ಅಷ್ಟೆ—ರಾಮಂದಿರು ಇಬ್ಬರು ಹೆಂಡಿರನ್ನು ಕಟ್ಟಿಕೊಂಡರು ; ತಂದೆಯನ್ನು ಮನೆ ಬಿಟ್ಟೋಡಿಸಿದರು ! ರಾಮ ಲಕ್ಷ್ಮಣರಂತೂ ಆಸ್ತಿಪಾಸ್ತಿಗಾಗಿ ಹಣಾಹಣಿ ಹೊಡೆದಾಡಿದರು, ಹರಿಶ್ಚಂದ್ರರು ಶತ ಸುಳ್ಳು ಹೇಳಿ, ಜೂಜಾಡಿ, ಜೈಲಿಗೆ ಹೋದರು. ಕೃಷ್ಣಗಳು ಆ ದೇವನ ಒಂದೇ ಒಂದು ಗುಣವನ್ನು ಉಳಿಸಿಕೊಂಡರು ಕಂಡ ಕಾಲೇಜು ಕನ್ಯೆಯರ ಹಿಂದೆಲ್ಲ ತಿರುಗಿದರು; ಗೋವಿಂದಗಳು ಪಾಪರ್ ಚೀಟಿ ತೆಗೆದುಕೊಂಡು ಹೆಗಲಿಗೆ ಜೋಳಗೆ ತಗುಲಿ ಹಾಕಿಕೊಂಡು ಹಣೆಯ ನಾಮದೊಂದಿಗೆ ಹೊರಬಿದ್ದರು ; ಗೋಪಾಲಗಳು ಗೋವುಗಳನ್ನು ಮರೆತು ಕುದುರೆ ರೇಸುಗಳಲ್ಲಿ ಕೂತರು ! ಅರ್ಜುನ ಕೈಲಿ ಹಿಡಿದದ್ದೆಲ್ಲ ಅವನು ಬಾಕಿಕೊಡಬೇಕಿದ್ದ

ಬಿಲ್ಲುಗಳೇ ! ಭೀಮಸೇನನಂತೂ ತಿರುವೇ ತಿರುವಿದ ಅವನ ಬಲವಾದ ರಟ್ಟೆಗಳಿಂದ— ಹೋಟೆಲಿನ ರುಬ್ಬುಗುಂಡನ್ನು !

ದೇವರ ಹೆಸರಿಗೆ ಅವಮಾನ ಮಾಡುವುದು ಬೇಡವೆನಿಸಿತು. ದೇವರ ಅಥವಾ ಹಿರಿಯರ ಹೆಸರಿಡುವುದು—ನವನವೀನ ಮಾದರಿಯಲ್ಲಿ ಕೂಗುವುದು ; ಉದಾಹರಣೆ—ಮೀನಾಕ್ಷಿ ಮೀಣಾ ಆದಳು ; ಅಜ್ಜಿ ಹೆಸರಿಟ್ಟುಕೊಂಡ ರಂಗಮ್ಮ ರಾಗಿಣಿಯಾದಳು ; ತಾತನ ಹೆಸರನ್ನಿಟ್ಟ ಗಿರಿಯಪ್ಪ ಗಿರೀಶ್ ಆದ ; ನಮ್ಮ ಸರಸು ಮೂರನೇ ಮಗಳಿಗೆ ನಾಮಕರಣ ಮಾಡಿದ್ದು, 'ಸುಬ್‌ಕುಪ್ ಸುಹಾಸಿನಿ' ಎಂದು— ಸುಬ್ಬಮ್ಮ ಸರಸುವಿನ ತಾಯಿ, ಕುಪ್ಪಮ್ಮ ಮೈಲಾರಯ್ಯನ ಮಾತೆ, ಸುಹಾಸಿನಿ ದಂಪತಿಗಳು ಮುದ್ದಿನಿಂದ ಕೂಗುವ ಹೆಸರು !

ಇತ್ತೀಚಿನ ರೀತಿನೀತಿ, ಸಿನಿಮಾ ತಾರೆಯರ ನಾಮಸ್ಮರಣೆ. (ಅವರೇನೋ ತಮ್ಮ ಹಳೆಯ ಹೆಸರಿನ ಕಿಲುಬು ತೊಳೆದು ಕಲಾಯಿ ಹಚ್ಚಿ ಥಳುಕು ಮಾಡಿರು ತ್ತಾರೆ !) ಎಲ್ಲರ ಮನೆಯಲ್ಲೂ ಒಂದು ಸಾಧನವೋ, ದಿಲೀಪನೋ, ಅಮಿತಳೋ, ಪ್ರದೀಪನೋ, ಮಂದನಳೋ, ಅಶೋಕನೋ ಇರಲೇಬೇಕು. ಕೆಲವರಂತೂ ಅರ್ಥ ಮರಿಯದೆ ಆ'ನಕ್ಷತ್ರ'ಗಳ ಮನೆತನದ ಹೆಸರನ್ನೂ ಸೇರಿಸಿಟ್ಟಿದ್ದಾರೆ. ಹಿಂದೆ, ಒಂದು ಮಗುವನ್ನು ನಳಿನಿಜಯವಂತಿ ಎಂದೇ ಕರೆದರು. ಮೊನ್ನೆ ಒಂದು ಮಗುವಿಗೆ ಮಾಲಾಸಿನ್ಹ ಎಂದು ಹೆಸರಿಟ್ಟಿದ್ದಾರೆ !

ಇನ್ನೊಂದು ಚಪಲ—ದೊಡ್ಡ ಅಧಿಕಾರಿಯ ಹೆಸರೋ ಪ್ರಮುಖ ರಾಜ ರಾಣಿಯ ಹೆಸರನ್ನೋ ಇಡುವುದು, ಸತೀಶ್ ಎನ್ನುವ ಹುಡುಗ ಐ.ಎ.ಎಸ್. ಪಾಸುಮಾಡಿದನೆಂದು, ಅವರ ನೆಂಟರಿಷ್ಟರ ಮನೆಯಲ್ಲಿ ಹುಟ್ಟಿದ ಮಕ್ಕಳಿಗೆಲ್ಲ ಅದೇ ನಾಮಕರಣವಾಯ್ತು ! (ಹಳೆಯ ಮಾತು ; ಮಗ ದಿವಾನನಾದಾನೆನ್ನುವ ಆಶೆಯಿಂದ ಪೂರ್ಣಯ್ಯ ಎಂದು ಕರೆದರಂತೆ ಮಗುವನ್ನು. ಆ ಹುಡುಗ 'ಪೂರಣ' ಅಂದರೆ ಹೂರಣ ತಿನ್ನುವುದರಲ್ಲಿ ನಿಸ್ಸೀಮನಾಗಿ, ತಿಥಿ ಬ್ರಾಹ್ಮಣನಾದನಂತೆ !) ಗಾಂಧಿ, ರಾಜೇಂದ್ರಪ್ರಸಾದ್, ಜವಹರ್, ಎಂದು ಅನೇಕರು ಹೆಸರಿಟ್ಟಿದ್ದಾರೆ. ಅವರು ಮುಂದೆ ಪಕ್ಕಾ ದೇಶದ್ರೋಹಿಗಳಾಗದಿದ್ದರೆ ಸಾಕು !

'ಇಂದಿರ' ಎನ್ನುವುದು ಹಳೆಯಕಾಲದ ಹೆಸರುಗಳ ಸಾಲಿಗೆ ಸೇರಿತ್ತು. ಆದರೆ ಇನ್ನು ಮುಂದೆ, ಸಾವಿರದೊಂಬೈನೂರ ಅರುವತ್ತಾರರಲ್ಲಿ ಹುಟ್ಟುವ ಹೆಣ್ಣುಮಕ್ಕಳಲ್ಲಿ ಅರ್ಧಕ್ಕರ್ಧ 'ಇಂದಿರ'ಗಳಿದ್ದಾವು ! ಯಾವ ತಾಯಿಗೆ ತಾನೇ ತನ್ನ ಮಗಳು ಮುಖ್ಯ ಮಂತ್ರಿಯಾಗಲಿ ಅನ್ನುವ ಆಶೆಯಿಲ್ಲದಿದ್ದೀತು ? (ಅತಿ ಆಶೆಯಲ್ಲಿ ಇಂದಿರ ಗಾಂಧಿ ಎಂದೇ ಸಂಪೂರ್ಣವಾಗಿ ಇಡದಿದ್ದರೆ ಸಾಕು !)

ಹೆಸರಿನಲ್ಲೇನಿದೆ ಅನ್ನುವುದಕ್ಕಾಗುವುದಿಲ್ಲ. ಯಾವ ಹೆಸರಿನಲ್ಲಿ ಏನು ಮಹಿಮೆ (?) ಅಡಗಿದೆಯೋ !

ಅಲ್ಲಲ್ಲಿ ಏನೇನು

(ಮಾದರಿ ಪತ್ರಿಕಾ ವರದಿಗಳು)

೧. ಟಾರೂರು, ಜನವರಿ 9: ಈ ಊರಿನ ರಸ್ತೆಗೆ ಟಾರು ಬಳಿದರೆ ಖರ್ಚು ಜಾಸ್ತಿ ಆಗುತ್ತೆಂದು ಉಳಿತಾಯ ಯೋಜನೆಯ ಪ್ರಕಾರ ಅಲ್ಲಿ ನಡೆಯುವ ಜನಗಳ ಕಾಲುಗಳಿಗೇ ಸಣ್ಣ ಬಳಿಯುವಂತೆ ಟಾರು ಬಳಿಯಬೇಕೆಂದು ಪಂಚಾಯಿತಿ ತೀರ್ಮಾನಿಸಿದೆಯಂತೆ ಎಂದು ಪತ್ರಿಕಾಘೋಷ್ಠಿಯಲ್ಲಿ ಮುನಿಸಿಪಲ್ಟಿ ಚೇರ್‌ಮನ್ ತಿಳಿಸಿದರು.

೨. ಒಂಟಿಕೊಪ್ಪಲ್, ಜ. 1೩: ಇಲ್ಲಿನ ಪಂಚಾಂಗ ಕರ್ತರು ಈ ಬರುವ ವರ್ಷದ ಪಂಚಾಂಗಗಳಲ್ಲಿ ತಿಂಗಳಿಗೆ ನಾಲ್ಕು ಏಕಾದಶಿಗಳನ್ನು ಬರುವಂತೆ ಗಣಿಸಿದ್ದಾರಂತೆ. ಘನ ಸರ್ಕಾರದ ಪ್ರಭಾವದಿಂದ ದ್ವಾದಶಿಗಳು ಬರದಂತೆ ಅಚ್ಚುಮಾಡಿದ್ದಾರಂತೆ.

೩. ಸಂತಾನಪುರ, ಜ. 9: ಇಲ್ಲಿನ ಪ್ರೈಮರಿ ಶಾಲೆಯಲ್ಲಿ ಊರಿನ ಪ್ರಮುಖ ಡಾಕ್ಟರು ಮಿತಸಂತಾನ ಯೋಜನೆ ಬಗ್ಗೆ ಹಿತನುಡಿಗಳನ್ನಾಡಿದರು.

೪. ಬೈಗೂರು, ಜ. 6: ಇಲ್ಲಿನ ಪೋಲೀಸ್ ದಳದವರು ನಿನ್ನೆ ಅಂಗಡಿಗಳಿಗೆಲ್ಲಾ ಭೇಟಿಮಾಡಿ ಡಿಫೆನ್ಸ್ ಫಂಡಿಗೆ ವರ್ತಕರಿಂದ ಸಾಕಷ್ಟು ಪಡೆದಿದ್ದಾರಂತೆ.

೫. ಗೋಲ್ಡೂರು, ಜ. 10: ಇನ್ನುಮೇಲೆ ಚಿನ್ನಕ್ಕೆ ಬದಲಾಗಿ ಗೋಲ್ಡ್ ಬಾಂಡ್ ಸರ್ಟಿಫಿಕೇಟ್ ಕೊಟ್ಟಹಾಗೇ ಅಕ್ಕಿ ಬಾಂಡ್, ಸಕ್ಕರೆ ಬಾಂಡ್, ಗೋಧಿ ಬಾಂಡ್, ಸೀಮೇ ಎಣ್ಣೆ ಬಾಂಡ್, ಇಡ್ಲಿ ಬಾಂಡ್. ದೋಸೆ ಬಾಂಡ್ ಮಾಡುವ ಯೋಜನೆ ಇದೆಯೆಂದೂ, ಅದಕ್ಕಾಗಿ ಪತ್ರಿಕಾ ನಷ್ಟಿಪರಿಗೆ ನ್ಯೂಸ್ ಪ್ರಿಂಟ್(ಖೋತಾ) ಕಡಿಮೆಮಾಡಲಾಗುತ್ತದೆಂದೂ ನಂಬಲನರ್ಹವಾದ ನಮ್ಮ ಸ್ವಂತ ಸುದ್ದಿಗಾರರು ತಿಳಿಸಲು ಹಿಂಜರಿದಿದ್ದಾರೆ.

—ಹಾ. ಮ್ಮೆ. ಸೂರಿ.

ತಿರುಪತಿಗೆ ಹೋಗಿ ಬಂದಳು ಸಾತಕ್ಕ
ಈಗ ಯಾರಿಗೂ ಆಗುಲ್ಲ, ಅವಳ್ನೋಡಕ್ಕ
ಹಾಕ್ತಾಳೊಮ್ಮೆ ಮುಸುಕ್ನ
ತೊಡ್ತಾಳೊಮ್ಮೆ ಟೋಪ್ನ
ಆದರೂ ನವೆ ಹತ್ತಿದರೆ ತೆಗೀತಾಳೆ, ತೀಡಕ್ಕ

ಉಪವಾಸ ಸತ್ಯಾಗ್ರಹ

ಆಂಗ್ಲಮೂಲ ★ ಕನ್ನಡಕ್ಕೆ

ಶ್ರೀ ಎಂ. ಜಿ. ಶಿರಾಳಿ ಇಂದಿರಾಪ್ರಿಯ

"Four hostile newspapers are more to be feared than a thousand boyanets"

—*Napoleon.*

ಕುಂಭಪುರದ ನಮ್ಮ ವೆಂಕಟರಾಯರಿಗೆ, ಒಂದು ಮಿತ್ರ ಪತ್ರಿಕೆಯು, ನಾಲ್ಕು ಶತ್ರು ಪತ್ರಿಕೆಗಳಿಗಿಂದ ಹೆಚ್ಚು ಅಪಾಯಂಕಾರಿ ಎನಿಸಿತ್ತು. ಹೀಗೆ ಅವರು ಹೇಳ ಬೇಕಾದರೆ ಅದಕ್ಕೆ ಹಿನ್ನೆಲೆ—"ಕುಂಭಪುರ ವಾರ್ತೆ" ಪತ್ರಿಕೆ.

ನಿಜವಾಗಿ ಹೇಳಬೇಕೆಂದರೆ, ಪತ್ರಿಕೆಗಿಂತ ಹೆಚ್ಚಿಗೆ ವೆಂಕಟರಾಯರ ಪತ್ರಿಕಾ ಸಮ್ಮೇಳನವೇ ಕಾರಣ ಎನ್ನಬಹುದು. ಪತ್ರಿಕಾಸಮ್ಮೇಳನ ಏಕೆ ಕರೆದಿದ್ದರೆಂದರೆ ಕುಂಭಪುರದ ಪುರಸಭೆಯವರು ಅಡಿಕೆಯ ವ್ಯಾಪಾರದ ಮೇಲೆ ತೆರಿಗೆ ವಿಧಿಸಿದ್ದರು. ಸಮಾಜವಾದವನ್ನು ಧ್ಯೇಯವಾಗಿಟ್ಟುಕೊಂಡು ಅಧಿಕಾರಕ್ಕೆ ಬಂದ ಲೋಕಾ ಸೇವಾಪಾರ್ಟಿಯು ತನ್ನ ಧ್ಯೇಯಕ್ಕನುಗುಣವಾಗಿ ತೆರಿಗೆ ವಿಧಿಸಿದ್ದರೂ ಸಹ ಕಳೆದ ಚುನಾವಣೆಯಲ್ಲಿ ಪರಾಜಯಗಳಿಸಿದ್ದ ಜನ ಸೇವಾ ಪಾರ್ಟಿಯು ವೆಂಕಟರಾಯರಿಗೆ ಬೇಕೆಂತಲೇ ಮಾಡಿದ್ದಾರೆನಿಸಿತ್ತು.

ವೆಂಕಟರಾಯರು, ಕುಂಭಪುರ ವಾರ್ತೆಯ ಸಂಪಾದಕ ಕೃಷ್ಣಭಟ್ಟರಿಗೆ, ತಮ್ಮ ಅಡಿಕೆಮಂಡಿಯಲ್ಲಿ ನಡೆಸಲಿದ್ದ ಪತ್ರಿಕಾ ಸಮ್ಮೇಳನಕ್ಕೆ ವಿಶೇಷ ವರದಿಗಾರರನ್ನು ಕಳುಹಿಸಲು ಕೇಳಿಕೊಂಡಿದ್ದರು.

ಆವೇಳೆಯಲ್ಲಿ ಮಾಡಲು ಏನೂ ಧಂದೆ ಇಲ್ಲದ ಸುಬ್ಬರಾಯ ಕೃಷ್ಣಭಟ್ಟರ ವಿನಂತಿಯ ಪ್ರಕಾರ ವಿಶೇಷ ವರದಿಗಾರನ ಕೆಲಸ ನಿರ್ವಹಿಸಲು ಒಪ್ಪಿಕೊಂಡ. ಜತೆಗಾರನಾಗಿ ಸುಬ್ಬರಾಯನೊಡನೆ ಸ್ವಾಮಿ ಸಹ ಹೊರಟ.

ಕುಂಭಪುರ ವಿಜಯಾ ರೆಸ್ಟೋರೆಂಟ್‌ದ ಬಟಾಟವಡೆ ಹಾಗೂ ಕಾಫಿ ಸೇವನೆ ಯಾದ ನಂತರ ಲೋಕಾಸೇವಾ ಪಕ್ಷದ ಸಹಸ್ರನಾಮದಿಂದ ಪತ್ರಿಕಾ ಸಮ್ಮೇಳನ ಆರಂಭವಾಯಿತು.

"ಎಲ್ಲಾಬಿಟ್ಟು ನನ್ನ ವ್ಯವಹಾರದ ಅಡಿಕೆಯನ್ನೇ ಏಕೆ ತೆರಿಗೆಗೆ ಗುರಿಪಡಿಸ ಬೇಕು. ಇದು ಲಜ್ಜಾಸ್ಪದ. ಕುಂಭಪುರದ ನಿವಾಸಿಗಳಿಗೆ ಈ ಪತ್ರಿಕಾ ಸಮ್ಮೇಳನದ ಮೂಲಕ ಮಾಡಿಕೊಳ್ಳುವ ವಿನಂತಿ ಎಂದರೆ, ನಾನು ಈ ತೆರಿಗೆಯ ವಿರುದ್ಧ

ಕೊನೆಯುವರೆಗೆ ಹೋರಾಡುವೆನು." ಈ ವೇಳೆಗೆ ಸ್ಫೂರ್ತಿ ಬಂದು ಇಂಗ್ಲೀಷಿನಲ್ಲಿ "I will die fighting for this cause. I will certainly do something about it—Fast!" ಎಂದರು. "ಇದು ಖಂಡಿತವೇ ?" ಸುಬ್ಬರಾಯ ಪ್ರಥಮಬಾರಿಗೆ ಮಾತನಾಡಿದ.

"ಖಂಡಿತವಾಗಿ......" ಮೇಜು ಗುದ್ದಿದರು ವೆಂಕಟರಾಯರು. "ನೀವು ನಿಮ್ಮ ಮಾತುಬಿಟ್ಟು ಹಿಂದಕ್ಕೆ ಹೋಗಬಾರದು." ಸ್ವಾಮಿ ಮಧ್ಯೆ ಬಾಯಿಹಾಕಿದ.

ವೆಂಕಟರಾಯರು ಇನ್ನೊಮ್ಮೆ ಮೇಜು ಗುದ್ದಿ "ಬೇಕಾದರೆ ನನ್ನ ಅಡಿಕೆ ವ್ಯವಹಾರದ ಆಣೆ ಇಡುತ್ತೇನೆ. ನಾನು ನನ್ನ ಆಂದೋಳನವನ್ನು ಬಿಡುವುದಿಲ್ಲ." ಎಂದು, ಸುಬ್ಬರಾಯನಿಗೆ "ನನ್ನ ಹೇಳಿಕೆಗೆ ಸರಿಯಾಗಿ ಪ್ರಾಮುಖ್ಯತೆ ಸಿಗುವಂತೆ ವರದಿಮಾಡಬೇಕು." ಎಂದು ವಿನಂತಿಸಿಕೊಂಡರು. "ನಿಮಗೇಕೆ ಅದರ ಯೋಚನೆ ವೆಂಕಟರಾಯರೇ ನನ್ನ ವರದಿ ನೀವು ನೋಡಿದಾಗ ನೀವೇ ನಂಬಲಾರಿರಿ, ಅಷ್ಟು ಚೆನ್ನಾಗಿರುವುದು." ಸುಬ್ಬರಾಯ ಉತ್ತರಿಸಿದ. ಮುಂದೆ ನಡೆದ ಘಟನೆಗಳು, ಸುಬ್ಬರಾಯ ಹೇಳಿದ್ದು ಅಕ್ಷರ ಶಹ ನಿಜ ಎಂದು ಕಂಡುಬಂತು.

* * * *

ಎರಡು ದಿನಗಳು ಕಳೆದನಂತರ, ವೆಂಕಟರಾಯರು ಬದರುದ್ದೀನ ನಶ್ಯದ ಅಂಗಡಿಗೆ ಪುಕ್ಕಟೆ ನಶ್ಯದಸಲುವಾಗಿ ಆಗಮಿಸಿದ್ದರು. ಅಲ್ಲಿ ಕುಂಭಪುರದ ಉಂಚೋದ್ಯಗಾರರ ಗುಂಪು ಸೇರಿದಿತ್ತು. ಅವರಲ್ಲಿ ಅದೇನೋ ಚರ್ಚೆ ನಡೆದಿತ್ತು. ವೆಂಕಟರಾಯರು ಬರುತ್ತಲೇ ಚರ್ಚೆ ಅಷ್ಟಕ್ಕೇ ನಿಂತಿತು. ವೆಂಕಟರಾಯರು ಪುಕ್ಕಟೆ ನಶ್ಯ ಮೂಗಿಗೆ ಏರಿಸಿ ಗುಂಪಿನ ಕಡೆ ತಿರುಗಿದಾಗ, ಮಾಧವ ಪೈಗಳು ಮಾತನಾಡಿದರು. ನೀವು ಅಡಿಕೆಯ ವ್ಯವಹಾರದಮೇಲೆ ವಿಧಿಸಿರುವ ತೆರಿಗೆ ವಿರುದ್ಧ ಕ್ರಮ ತೆಗೆದು ಕೊಳ್ಳುವಿರಂತೆ ನಿಜವೆ ?"

"ಹೌದು, ಹೌದು, ನೀವು ಹೇಳುವುದು ನಿಜ," ಎಂದು ಹೆಮ್ಮೆಯಿಂದ ಹೇಳಿದರು ವೆಂಕಟರಾಯರು.

"ಹಾಗೋ, ನಿಮ್ಮ ಪತ್ರಿಕಾ ಸಮ್ಮೇಳನದ ವಿವರ ಕುಂಭಪುರ ವಾರ್ತೆಯಲ್ಲಿ ಪ್ರಕಟವಾಗಿದೆ ಅದೆಲ್ಲಾ ನಿಜವೆ...?" ಪೈಗಳು ಪ್ರಶ್ನಿಸಿದರು.

"ಕೊನೆಯ ಅಕ್ಷರದವರೆಗೂ ನಿಜ" ವೆಂಕಟರಾಯರು ಉತ್ತರಿಸಿದರು— ಇನ್ನೊಂದು ಚಿಟಿಕೆ ಪುಕ್ಕಟೆ ನಶ್ಯ ತೆಗೆದುಕೊಂಡು. "ಖಂಡಿತವಾಗಿಯೂ ಹಾಗೆ ಮಾಡುವಿರಾ ?" ಪೈಗಳ ಪುನರ್ ಪ್ರಶ್ನೆ.

"ಅದರಲ್ಲೇನು ಸಂಶಯ ?" ವೆಂಕಟರಾಯರ ಮರುಪ್ರಶ್ನೆ. ಏಕೆಂದರೆ, ನಾನು ಒಬ್ಬ ಮಿತ್ರನನ್ನು, ಕುಂಭಪುರ ಓರ್ವ ಅಡಿಕೆಮಂಡಿ ಸಾಹುಕಾರನನ್ನು

ಕಳೆದುಕೊಳ್ಳಬೇಕಲ್ಲಾ ಎಂದು ಚಿಂತೆ" ಎಂದು ಮಾಧವ ಪೈಗಳ ನಿಟ್ಟುಸಿರು ಬಿಟ್ಟು ಕುಂಭಪುರ ವಾರ್ತೆ ಪತ್ರಿಕೆಯ ಪ್ರತಿ ಹೊರತೆಗೆದರು.

ಪೈಗಳ ಕೈಲಿದ್ದ ಪತ್ರಿಕೆಯನ್ನು ವೆಂಕಟರಾಯರು ತೆಗೆದುಕೊಂಡು ಅದನ್ನು ಓದಿದ ರೀತಿ ಡಾ॥ ಜಾಕಿಲ್ ಸಹ ಇವರಬಳಿ ಪಾಠ ಕಲಿಯುವಂತಿತ್ತು.

ಪತ್ರಿಕಾ ಸಮ್ಮೇಳನದ ವರದಿ ಓದಿದಮೇಲೆ ಹಣೆಯಲ್ಲಿ ಮಂತ್ರಿಸೋಪಾದಿಯಲ್ಲಿ ಬೆವರು ಹನಿಗಳು ಮೂಡಿದುವು ಆಶ್ಚರ್ಯ ಹಾಗೂ ಕೋಪ ಎರಡು ಸಹ ವೆಂಕಟರಾಯರನ್ನು ಹುರಿದು ಮುಕ್ಕಲಾರಂಭಿಸಿದುವು. ಯಾರಾದರೂ ವೆಂಕಟರಾಯರ ಭುಜದ ಕಡೆಯಿಂದ ಕುಂಭಪುರವಾರ್ತೆ ಪತ್ರಿಕೆಯನ್ನು ಇಣಿಕಿ ನೋಡಿದ್ದರೆ ದಪ್ಪ ದಪ್ಪ ಅಕ್ಷರಗಳಲ್ಲಿ "ವೆಂಕಟರಾಯರ ಆಮರಣಾಂತ ಉಪವಾಸ ಸತ್ಯಾಗ್ರಹ" ಅಡಿಕೆ ವ್ಯವಹಾರದ ವಿರುದ್ಧ ತೆರಿಗೆ ವಿಧಿಸಿರುವುದೇ ಸತ್ಯಾಗ್ರಹಕ್ಕೆ ಕಾರಣ. ಎಂಬುದನ್ನು ಕಾಣಬಹುದಿತ್ತು.

ಪತ್ರಿಕಾ ಸಮ್ಮೇಳನದ ವರದಿ ವಿವರವಾಗಿ ಪ್ರಕಟವಾಗಿತ್ತು. ಪತ್ರಿಕೆಯ ಸಂಪಾದಕೀಯದಲ್ಲಿ ಸಂಪಾದಕ ಕೃಷ್ಣಭಟ್ಟ, ವೆಂಕಟರಾಯರ ದಿಟ್ಟ ನಿರ್ಧಾರಕ್ಕೆ ಅಭಿನಂದಿಸಿ, ಇಂಥ ಅಹಿಂಸಾ ಮಾರ್ಗ ಕೈಕೊಳ್ಳಲು ನಿರ್ಧರಿಸಿರುವುದು ಕುಂಭಪುರ ಇತಿಹಾಸದಲ್ಲಿಯೇ ಪ್ರಥಮ. ಇಂಥ ನಿರ್ಧಾರದಿಂದ ಅವರು ನೈತಿಕ ಒತ್ತಾಯ ತಂದಂತಾಗಿದೆ. ಅವರು ಉಪವಾಸ ವ್ರತವನ್ನು ಸಾರ್ವಜನಿಕ ಸ್ಥಳದಲ್ಲಿ ಕೈಗೊಳ್ಳುವುದು ಒಳ್ಳೆಯದು. ಏಕೆಂದರೆ ವಿನಾಕಾರಣ ಜನರಿಗೆ, ಆಹಾರ ಕದ್ದು ಸ್ವೀಕರಿಸುವರೆಂಬ ಅನುಮಾನವಿಲ್ಲದಂತಾಗುವುದು. ಅವರ ಆಮರಣಾಂತ ಉಪವಾಸ ಯಶಸ್ವಿಯಾಗಲಿ ಎಂದು ಹಾರೈಸುವ ಎಂದು ಸಂಪಾದಕೀಯ ಮುಗಿದಿತ್ತು. ಇದರಿಂದ ವೆಂಕಟರಾಯರಿಗೆ ಆಘಾತವಾಗಿತ್ತು. ಮೂರನೆಯಬಾರಿ ಮಂಗಳೂರು ಸ್ಪೆಶಲ್ ನಶ್ಯ ಒಂದು ಚಿಟಿಕೆ ತೆಗೆದುಕೊಂಡು ಮೂಗಿಗೇರಿಸಿದರು. ನಂತರ ತಾವು ಪತ್ರಿಕಾ ಸಮ್ಮೇಳನದಲ್ಲಿ ಹೇಳಿದ್ದನ್ನು ನೆನಪಿಗೆ ತಂದುಕೊಳ್ಳಲಾರಂಭಿಸಿದರು. ತಮಗೆ ಸ್ಫೂರ್ತಿ ಬಂದಾಗ ತಾವು ಇಂಗ್ಲೀಷ್‌ನಲ್ಲಿ ಹೇಳಿದ್ದು ಜ್ಞಾಪಕಕ್ಕೆ ಬಂತು. "I will die fighting for this cause, I will certainly do something about it—Fast" ಇದೇ ಎಲ್ಲದಕ್ಕೂ ಕಾರಣ. ಕೊನೆಯ ಪದಕ್ಕಿದ್ದ ಎರಡು ಅರ್ಥವನ್ನು ಕುಂಭಪುರವಾರ್ತೆಯ ಸಂಪಾದಕ ಕೃಷ್ಣಭಟ್ಟ ಸುಬ್ಬರಾಯನ ಸಹಾಯದಿಂದ ತಮ್ಮ ಕಾರ್ಯ ಸಾಧಿಸಿದ್ದಾರೆ. ಇಂಗ್ಲೀಷ್ ಭಾಷೆ ಎಂಥ ಭಾಷೆ· ಬೇರೇನು ಕಾರಣವಿಲ್ಲದಿದ್ದರೂ ಅವರ ಈ ವಿಶ್ವಾಸ ಘಾತುಕ ಭಾಷೆಯ ಸಲುವಾಗಿಯಾದರೂ ಅವರ ಭಾಷೆಯನ್ನು ದೇಶಬಿಟ್ಟು ಓಡಿಸಬೇಕು" ಎಂದು ವೆಂಕಟರಾಯರು ಯೋಚಿಸಿದರು.

ಈಗ ಕಾಲಮಿಂಚಿತ್ತು. ಉಪವಾಸ ವ್ರತ ಕೈಕೊಳ್ಳಲೇಬೇಕಿತ್ತು. ಏಕೆಂದರೆ ಕುಂಭಪುರ ವಾರ್ತೆಯು ಮೂಲಕ ಸಾಕಷ್ಟು ಪ್ರಚಾರವಾಗಿತ್ತು. ವೆಂಕಟರಾಯರ ಮನಸ್ಸು ಈ ಉಪವಾಸ ಸತ್ಯಾಗ್ರಹದ ಪರಿಣಾಮದ ಬಗ್ಗೆ ಚಿಂತಿಸಿತು. ಅದನ್ನು ಮರೆಯಲು ನಾಲ್ಕನೆಯಬಾರಿಗೆ ಒಂದು ಚಿಟಿಕೆ ನಶ್ಯ ಮೂಗಿಗೇರಿಸಿದರು.

ಉಪವಾಸ ಸತ್ಯಾಗ್ರಹ ಮಾಡಲು ಇಷ್ಟವಿಲ್ಲದ ವ್ಯಕಿಯೋರ್ವನನ್ನು ಅವನ ಇಚ್ಛೆಯ ವಿರುದ್ಧ ಅದನ್ನು ಕೈಗೊಳ್ಳುವಂತೆ ಮಾಡಿದ ಕೀರ್ತಿ ಕುಂಭಪುರಕ್ಕೇ ಮೀಸಲಾಗಿತ್ತು. ವೆಂಕಟರಾಯರು ತಮ್ಮ ಮಠಾರದ ಮುಂದೆ ವರಾಂಡದಲ್ಲಿ ಹಾಸಿದ ಹುಲ್ಲಿನ ಚಾಪೆಯಮೇಲೆ ಸತ್ಯಾಗ್ರಹ ಆರಂಭಿಸಿದರು. ಡಾ॥ ಸಾರಂಗಪಾಣಿ ಯವರು ವೆಂಕಟರಾಯರ ಟೆಂಪ್‌ರೇಚರ್ ಹಾಗೂ ನಾಡಿಯನ್ನು ಪರೀಕ್ಷಿಸಿ ವೈದ್ಯ ಕೀಯ ಪ್ರಕಟಣೆ ಹೊರಡಿಸಿದರು. ವೆಂಕಟರಾಯರು ಕೈಕೊಂಡ ಸತ್ಯಾಗ್ರಹದಿಂದ, ಜನಸೇವಾಪಾರ್ಟಿ ಹಾಗೂ ಅವರಿಗೆ ಸಾಲಕೊಟ್ಟವರಿಗೆ ಮನೋವ್ಯಾಕುಲ ಉಂಟಾಗಿದ್ದರೆ, ಕುಂಭಪುರದ ಹಾಸ್ಯಪ್ರಿಯರಿಗೆ ಲೋಕ ಸೇವಾಪಾರ್ಟಿಯವರಿಗೆ ಮೋಜಿನ ಪ್ರಸಂಗವಾಗಿತ್ತು. ಈ ಮೋಜನ್ನು ನೋಡಲು, ಸುದ್ದಿ ಹಬ್ಬಿದೊಡನೆ ಗುಂಪು ಗುಂಪಾಗಿ ಜನಗಳು ಸೇರಲಾರಂಭಿಸಿದರು.

ಕುಂಭಪುರ ವಿಜಯಾ ರೆಸ್ಟೋರೆಂಟ್‌ನ ವ್ಯವಹಾರ ಚತುರ ರಾಮಭಟ್ಟ, ವೆಂಕಟರಾಯರ ಮಠಾರದ ಎದುರು ಒಂದು ಶೆಡ್ ಹಾಕಿ ತನ್ನದೊಂದು ಹಂಗಾಮಿ ಶಾಖೆಯೊಂದದನ್ನು ತೆರೆಯುವುದರಲ್ಲಿ ಹಿಂದೆ ಬೀಳಲಿಲ್ಲ. ಇದರಿಂದ ವೆಂಕಟರಾಯರಿಗೆ ಇನ್ನೂ ಹೆಚ್ಚು ವ್ಯಸನವಾಯಿತು. ಏಕೆಂದರೆ, ರಾಮಭಟ್ಟನ ಬಟಾಟೆವಡೆಯ ಮೇಲೆ ವೆಂಕಟರಾಯರಿಗಿದ್ದ ಪ್ರೀತಿ ಎಲ್ಲರಿಗೂ ತಿಳಿದಿತ್ತು. ಈಗ ಅವನು ಅವರ ಎದುರಿಗೇ ತಯಾರಿಸುತ್ತಿದ್ದರೂ ಒಂದನ್ನೂ ತಿನ್ನುವುದಿರಲಿ, ಮುಟ್ಟುವಂತಿರಲಿಲ್ಲ. ವೆಂಕಟರಾಯರ ಆಜ್ಞೆಮೇರೆಗೆ, ಕೇಶವಹೆಗ್ಡೆ ರಾಮಭಟ್ಟನಿಗೆ ತನ್ನ ಶಾಖೆಯನ್ನು ವೆಂಕಟರಾಯರಿಗೆ ಕಾಣದಂತೆ ಬಟಾಟೆವಡೆ ತಯಾರಿಸುವಂತ ಜಾಗಕ್ಕೆ ವರ್ಗಾಯಿಸಲು ಕೇಳಿಕೊಂಡ. ಆದರೆ ರಾಮಭಟ್ಟನದು ಒಂದೇ ಉತ್ತರ "ನನಗಿಷ್ಟಬಂದಕಡೆ ನಾನು ಬಟಾಟೆವಡೆ ತಯಾರಿಸುವೆ. ಅದು ನನ್ನ ಹಕ್ಕು"

ಎಂಟನೇದಿನ ಕೇಶವ ಹೆಗ್ಡೆ ಕೃಷ್ಣಭಟ್ಟರಿಗೆ ಹೇಳಿ ಕಳುಹಿಸಿದ.

"ಕೃಷ್ಣಭಟ್ಟರೇ......" ವೆಂಕಟರಾಯರು ಕೀರಲು ಧ್ವನಿಯಲ್ಲಿ ಮಾತನಾಡಿ ದರು......"ಇದು ಹುಡುಗಾಟಿಕೆ ಹೋಗಿ ವಿಪರೀತಕ್ಕಿಟ್ಟುಕೊಂಡಿದೆ. ಏನಾದರೂ ಮಾಡಿ ನನ್ನ ಮರ್ಯಾದೆಗೆ ಮುಕ್ಕಾಗದಂತೆ ಈ ಪ್ರಸಂಗದಿಂದ ಪಾರುಮಾಡಿರಿ. ಇಲ್ಲ ವಾದರೆ ನನ್ನನ್ನು ಕೊಂದ ಪಾಪ ನಿಮಗೆ ತಟ್ಟುವುದು."

ಕೃಷ್ಣಭಟ್ಟರಿಗೆ ಕರುಣೆಬಂತು. ಆಗಲಿ ವೆಂಕಟರಾಯರು, "I will do something" ಎಂದರು. ಮುಂದೆ "Fast" ಎನ್ನಬೇಕೆಂದಿದ್ದವನು ತಡೆದು ಕೊಂಡರು.

* * * *

ಅಂದು ಸಂಜೆ ಒಂದು ವಿಚಿತ್ರ ಸಂಗತಿ ನಡೆಯಿತು. ಜಿಲ್ಲಾಧಿಕಾರಿ ಮಿ॥ ಆಂಡ್ರ್ಯೂಸ್, ಕೃಷ್ಣಭಟ್ಟ, ತಹಶೀಲ್‌ದಾರ ಶಾಬುದ್ದೀನ್ ಹಾಗೂ ಮಾಮೂಲಿ ಪೋಲೀಸ್ ಬಂದೋಬಸ್ತಿನೊಡನೆ ವೆಂಕಟರಾಯರು ಉಪವಾಸ ಸತ್ಯಾಗ್ರಹ ನಡೆಸಿದ್ದ ಜಾಗಕ್ಕೆ ಆಗಮಿಸಿದರು. ಪೋಲೀಸರು ಮೋಜು ನೋಡುತ್ತಿದ್ದ ಜನರನ್ನು ಚದುರಿಸಿ ದರು.

ಮಿ॥ ಆಂಡ್ರ್ಯೂಸರು ವೆಂಕಟರಾಯರ ಹತ್ತಿರಬಂದು "Why are you starving Mr. Venkatarao?" ಎಂದು ಕೇಳಿ ಉಪವಾಸದ ಮಹತ್ವದ ಬಗ್ಗೆ ಆಂಗ್ಲರಿಗಿದ್ದ ಅಜ್ಞಾನ ಪ್ರದರ್ಶಿಸಿದರು. ವೆಂಕಟರಾಯರು ಸಣ್ಣ ಧ್ವನಿಯಲ್ಲಿ ಹೇಳಬೇಕಾದದ್ದನ್ನು ಹೇಳಿದರು. ಅದಕ್ಕುತ್ತರವಾಗಿ ಆಂಡ್ರೂಸ್ ಸಾಹೇಬರು ಮುಖಗಂಟಿಕ್ಕಿ" you must be nuts to fast for betel nuts, couldn't you find quicker way of popping off? Why choose starvation? You must be really nuts" ಎಂದು ತನ್ನ ಪರಿವಾರದೊಡನೆ ಕಾರಿನಲ್ಲಿ ಹೊರಟುಹೋದರು. ಕುಂಭಪುರ ವಾರ್ತೆಯ ಮಾರನೆಯ ಸಂಚಿಕೆಯಲ್ಲಿ ಭ್ರಮೆಯುಂಟಾಗುವಂತಹ ಸುದ್ದಿ ಪ್ರಕಟವಾಗಿತ್ತು. ಅವರ ಶೀರ್ಷಿಕೆ ಈರೀತಿ ಇತ್ತು "ವೆಂಕಟರಾಯರ ಉಪವಾಸ ಸತ್ಯಾಗ್ರಹದ ಮುಕ್ತಾಯ." "ಆಂಗ್ಲರ ಕಾರ್ಯ ಕುಶಲತೆಯ ವಿಜಯ" ಜಿಲ್ಲಾಧಿಕಾರಿ ಆಂಡ್ರ್ಯೂಸರವರ ಆಗ್ರಹದ ವಿನಂತಿಮೇರೆಗೆ ವೆಂಕಟರಾಯರು ಉಪವಾಸ ನಿಲ್ಲಿಸಿರುವರು." ಇನ್ನೂ ಕೆಲವು ವಿವರವನ್ನೊಳಗೊಂಡ ಈ ಪತ್ರಿಕೆ ಮಿ॥ ಆಂಡ್ರ್ಯೂಸ್‌ರವರ ಕೈಗೆ ಸಿಕ್ಕದಂತೆ ಕೃಷ್ಣಭಟ್ಟರು ದಕ್ಷತೆವಹಿಸಿದ್ದರು.

ವೆಂಕಟರಾಯರಿಂದ, ಉಪವಾಸ ಸತ್ಯಾಗ್ರಹ ನಿಲ್ಲಿಸಿದ ವರದಿಗೆ ಜಾಹಿರಾತು ದರದಲ್ಲಿ ಕೃಷ್ಣಭಟ್ಟರು ಹಣ ವಸೂಲಿ ಮಾಡಿದ್ದುದು ಕುಂಭಪುರದ ಕೆಲವರಿಗೆ ಮಾತ್ರ ಗೊತ್ತು.

ಗ್ರಾಮದ ಹೆಣ್ಣು

ಅನಂತಯ್ಯ ಮತ್ತು ನಾನು ಭೇಟಿಯಾದುದು ಮುಂಬಯಿಯಲ್ಲೇ! ಮಂಗಳೂರಿನ ನಮ್ಮ ಗೆಳೆತನ ಮತ್ತೆ ಚಿಗುರಲು ಇದರಿಂದ ಸಾಧ್ಯವಾಯಿತು. ಅವ ಯಾವುದೋ ಒಂದು ಕಂಪನಿಯಲ್ಲಿ ಮ್ಯಾನೇಜರನಾದ. ಆಗಾಗ್ಗ ನಮ್ಮ ಮನೆಗೂ ಬಂದು ಹೋಗಿ ಮಾಡುತ್ತಿದ್ದ. ನನ್ನ ಹೆಂಡತಿಯನ್ನು ಅತ್ತಿಗೆ ಎಂದೇ ಕರೆಯುತ್ತಿದ್ದ. ನನ್ನ ಸಿಂಬಳ ಸರಿಸುತ್ತಿದ್ದ ಕಂದಮ್ಮಗಳನ್ನು ತನ್ನ ಟೆರಿಲಿನ್ ಸೂಟು ಕೊಳೆಯಾದರೂ ಲೆಕ್ಕಿಸದೆ ಎತ್ತಿಕೊಂಡು ಮುದ್ದಾಡುತ್ತಿದ್ದ. ಇಂತಹ ಒಂದು ಸಂದರ್ಭದಲ್ಲೇ ನಾನು ಅನಂತಯ್ಯನಿಗೆ " ನೀನೂಮದುವೆ ಮಾಡಿಕೊಂಡು ಸುಖವಾಗಿರಬಾರದೆ (ಕಷ್ಟಪಡಬಾರದೆ) ಅನಂತಯ್ಯ" ಅಂತ ಕೇಳಿದೆ.

"ಅದಕ್ಕಿನ್ನೂ ವೇಳೆ ಬಂದಿಲ್ಲ ಕಣಯ್ಯ" ಎಂದು ಮಾತು ಹಾರಿಸಲು ನೋಡಿದ ಅನಂತಯ್ಯ.

"ವೇಳೆ ಹ್ಯಾಗೆ ಬರುತ್ತಯ್ಯಾ. ನಿಮ್ಮ ತಂದೆ ತಾಯಿ ಈ ಬಗ್ಗೆ ಏನೂ ಬರ್ಯೋದಿಲ್ಲವೊ" ಎಂದು ಮಾತಿನ ಎಳೆಯನ್ನು ಬಿಡದೆ ಹಿಂಜಿದೆ. "ಅವರ ತಗಾದೆ ಬಹಳ ಆಗ್ಹೋಗಿದೆ. ಇಲ್ಲೇ ಯಾವುದಾದ್ರು ತಿಳಿದಿದ್ರೆ ಮದುವೆ ಮಾಡ್ಕೊ ಅಂತ ಬರೆದಿದಾರೆ. ಅಂತೂ ಅವರಿಗೆ ನನ್ನ ಮದುವೆ ಬೇಗ ಆಗ್ಬೇಕೂಂತ..."

"ನ್ಯಾಯವೇ ನಿನ್ನನ್ನೇನು ಗುಂಡುಗೋವಿ ಹಾಗೆ ಬಿಡಲಿಕ್ಕೆ ಸಾಧ್ಯವೇ ? ಅವರ್ಗೂ ಮೊಮ್ಮಕ್ಕಳನ್ನು ಎತ್ತಿಕೊಬೇಕು ಅಂಬೊ ಆಸೆ ಇರುಲ್ವೆ ?"

"ಅದೆಲ್ಲಾ ಇರುತ್ತೆ ಕಣಯ್ಯ. ಆದ್ರೆ ನನಗೆ ಒಪ್ಪೊ ಹುಡುಗಿ ಸಿಕ್ಕಿಲ್ಲವಲ್ಲ."

"ಯಾಕೆ ಸಿಕ್ಕಿಲ್ಲ. ನೋಡು ಅಕ್ಕಿಗೆ ಬರಗಾಲವಿದ್ರೂ, ಹುಡುಗಿಯರಿಗೆ ಏನೂ ಕೊರತೆಯಿಲ್ಲ. ನೀನು 'ಹೂ' ಅನ್ನು ಬೊಂಬಾಯಲ್ಲೇ ಒಳ್ಳೇ ಒಂದು ಹೆಣ್ಣುನೋಡಿ ಮದುವೆ ಮಾಡಿಬಿಡೋಣ..."

"ಅದೆ ನಾನು ಬೇಡಾಂತಿರೋದು. ನನಗೆ ಈ ಬಣ್ಣದ ಬೀಸಣಿಗೆಗಳೆಲ್ಲಾ ಬೇಕಾಗಿಲ್ಲ..."

"ಹಾಗಿದ್ರೆ ಹಳ್ಳಿ ಹುಡುಗಿಯನ್ನು ಮದುವೆ ಯಾಗ್ತೀಯೇನು?"

"ಹೌದು" ಅಂತ ತಲೆಯಾಡಿಸಿದ ಅವ, ಭಂಡನಂತೆ.

"ಅಲ್ಲಯ್ಯಾ ನಿನ್ನ ವಿದ್ಯೆ ಬುದ್ಧಿಗೆ ತಕ್ಕಂತವಳನ್ನ ಮದುವೆಯಾಗದೇ ಯಾವುದೋ ಹಳ್ಳೀದನ್ನ ಕಟ್ಕೋತೀನಿ ಅಂತೀಯಲ್ಲಾ" ಅಂದೆ.

"ನೋಡಯ್ಯಾ ಮೂಳೆ ಹಂದರಕ್ಕೆ ಬೆಡ್‌ಶೀಟ್ ಹೊದಿಸಿರೋ ಹಾಗಿರೋ ಈ ಹುಡುಗಿಯರು ನನಗೆ ಬೇಡ. ನನಗೆ ಬೇಕಾಗಿರೋದು ಒಳ್ಳೆ ಧೃಡಕಾಯಳಾದ ಆರೋಗ್ಯವಂತಳಾದ..."

"ರೂಪಸಿಯಾದ ಹಳ್ಳಿ ಹುಡುಗಿ..." ಎಂದು ಮುಗಿಸಿದೆ ನಾನು.

"ಹೌದು" ಎಂದ ಅನಂತಯ್ಯ.

ಅನಂತಯ್ಯ ಊರಿಗೆ ಮರಳಿದ. ಗ್ರಾಮಶೀಮೆಯ ಹೆಣ್ಣೊಂದನ್ನು ಕರೆತಂದಿದ್ದರಂತೆ. ಒಳ್ಳೇ ಚೆಂದುಳ್ಳಿಯ ಹೆಣ್ಣು. ಒಪ್ಪಿಕೊಂಡು ಮದುವೆ ಮಾಡಿ ಕೊಂಡೇಬಿಟ್ಟ. ಅವನ ಅತ್ತೆಮಾವ, ಗ್ರಾಮದ ಪ್ರಸಿದ್ಧ ಮನೆತನದ ಹೋಳಿಗೆ ಭೀಮಸೇನರಾವ್ ಮತ್ತು ಅವರ ಪತ್ನಿ ವೆಂಕಮ್ಮನವರು. ತಮ್ಮ ಮಗಳಿಗೆ ಒಳ್ಳೆಯ ಗಂಡು ಸಿಕ್ಕಿತೆಂದು ಅವರು ಹಿಗ್ಗಿದರು. ಮದುವೆಯಾದ ಮೂರನೆ ದಿನವೇ ಹೆಂಡತಿ ಯನ್ನು ಕರೆದುಕೊಂಡು ಅನಂತಯ್ಯ ಬೊಂಬಾಯಿಗೆ ಬಂದ. ಬಂದು ಹೊಸ ಸಂಸಾರ ಹೂಡಿಯೇ ಬಿಟ್ಟ.

ಕಾಲಚಕ್ರ ಉರುಳಿತು. ಅನಂತಯ್ಯ ಒಂದು ದಿನ, ಆಫೀಸಿಗೆ ನನ್ನನ್ನು ಹುಡುಕಿಕೊಂಡು ಬಂದ. "ಒಬ್ಬ ಒಳ್ಳೆ ಮನಶಾಸ್ತ್ರಿಯನ್ನು ಹುಡುಕಿಕೊಡಯ್ಯ" ಅಂತ ಕೇಳಿದ. ಮುಂಬಯಿಯಲ್ಲಿ ಗಲ್ಲಿಗೊಂದು ಸೈಕಿಯಾಟ್ರಿಸ್ಟುಗಳ ಬೋರ್ಡುಗಳು ಇದ್ದುದರಿಂದ ಇದರಲ್ಲಿ ಒಳ್ಳೆಯವರ್‍ಯಾರು, ಕೆಟ್ಟವರ್‍ಯಾರು ಎಂದು ತಿಳಿಯಲು ನನಗೆ ಕಷ್ಟವಾಗಿತ್ತು. ಅದೂ ಅಲ್ಲದೆ ನಮ್ಮ ವಂಶದಲ್ಲೇ ಯಾರಿಗೂ ಮಿದುಳಿನ ಬೇನೆ ಇರಲಿಲ್ಲವಾದ್ದರಿಂದ, ನನಗೆ ಮನಶಾಸ್ತ್ರಿಗಳ ಸಂಬಂಧ ಕುದುರಲು ಅವಕಾಶವೇ ಇರಲಿಲ್ಲ. ಅನಂತಯ್ಯ ಇದ್ದಕ್ಕಿದ್ದಂತೆ ಮನಶಾಸ್ತ್ರಿಗಳ ಬಗ್ಗೆ ಕೇಳಿದಾಗ ನನಗೆ ಸಂಶಯವಾಯಿತು.

"ಅನಂತಯ್ಯ ನಿನ್ನಲ್ಲಿ ಹುಚ್ಚಿನ ಚಿಹ್ನೆಯೇನೂ ಕಾಣಲಿಲ್ಲ. ಅಂತಹದರಲ್ಲಿ ನೀನು ಮನಶಾಸ್ತ್ರಿಯನ್ನು ನೋಡುವ ಪ್ರಮೇಯವೇನು ?" ಅಂತ ವಿಚಾರಿಸಿದೆ.

"ನನಗಲ್ಲಯ್ಯ ನನ್ನ ಹೆಂಡತಿಗೆ" ಅಂದ ಅವ.

"ನಿನ್ನ ಹೆಂಡತಿಗೆ ಹುಚ್ಚೆ......?"

"ಛೇ...ಛೇ...ಹುಚ್ಚಲ್ಲ. ಅದೇನು ಆಗಿದ್ಯೋಪ್ಪ. ಈಚೆಗೆ ಅವಳ ದೇಹಸ್ಥಿತೀಲಿ ಪೂರಾ ವ್ಯತ್ಯಾಸವಾಗಿ ಹೋಗಿದೆ...."

" ಅಯ್ಯೋ ವಂಕಿ ತಿಂಗಳು ಗಿಂಗಳು ತುಂಬಿರಬೇಕು ಕಣೋ ಅಂತ ಛೇಡಿಸಿದೆ ಹಿತವಾಗಿ. ಎಷ್ಟಾದರೂ ನಾನು ಸ್ವಲ್ಪ ಸೀನಿಯರ್ ಇಸಂ ಆಗಿದ್ದೆ. ಇಂತಹ ವಿಷ ಯಗಳಲ್ಲಿ ನನಗೆ ಸಾಕಷ್ಟು ಮಾಹಿತಿಯೂ ಇತ್ತು,

" ಅದೆಲ್ಲಾ ಅಲ್ಲಪ್ಪ ನಾನು ಎಂತಹ ಪ್ಯಾಥಾಲಜಿಸ್ಟ್‌ಗಳನ್ನೇ ನೋಡಿದ್ದಾಯ್ತು, ಯಾರಿಗೂ ಇವಳ ಕಾಯಿಲೆಯ ಮರ್ಮವೇ ಅರ್ಥವಾಗುಲ್ಲ. ಎಲ್ಲಾ ತಿಂತಾಳೆ, ಮಾಡ್ತಾಳೆ. ಆದ್ರೆ ಸುಮ್ನೆ ಸವೆದು ಹೋಗ್ತಿದ್ದಾಳೆ. ಅದಕ್ಕೆ ಸೈಕಿಯಾಟ್ರಿಸ್ಟ್‌ಗಳ ನ್ಯಾದ್ರೂ ಕನ್‌ಸಲ್ಟ್ ಮಾಡೋಣ ಅನ್ಕೊಂಡೆ ಇದರಿಂದಲಾದ್ರೂ ಅವಳಿಗೆ ಗುಣ ವಾದ್ರೆ ಮಾರಂತಿಗೆ ವಡೆಸರ ಮಾಡಿ ಹಾಕ್ತೀನಿ " ಅಂದ.

ಹೆಂಡತಿ ಅಂದ್ರೆ ಅನಂತಯ್ಯನಿಗೆ ಶಾನೆ ಪ್ರೀತಿ. ಅವನ ಹೆಂಡತಿ ರತ್ನಳನ್ನು ರತ್ನದಂತೆಯೇ ನೋಡಿಕೊಳ್ಳುತ್ತಿದ್ದ

ಮನೆಯಲ್ಲಿ ಆಳು ಕಾಳುಗಳು. ಅಡುಗೆಯವನು. ಹೀಗಾಗಿ, ರತ್ನಳು ಸುಖ ವಾಗೇ ಇದ್ದಳು. ಊಟ, ತಿಂಡಿ, ರೇಡಿಯೋ ಕಿವಿ ಹಿಂಡುವುದು ಇಷ್ಟೇ, ಸಂಕ್ಷೇಪ ವಾದ ಕೆಲಸ ರತ್ನಳದು. ಇಂತಹ ಸಂದರ್ಭದಲ್ಲಿ ಅವಳು ಇನ್ನೂ ಊದಿಕೋಬೇಕಾ ದವಳು, ಸವೆಯಲು ಕಾರಣ ? ಅನಂತಯ್ಯ ಮೊದಲೇಮೆದುಗಸ್ತ. ಜೊತೆಗೆ ಹೆಂಗರು ಳಿನವನು, ಇಂತಹವನು ರತ್ನಳನ್ನು,ಮೆಚ್ಚಿದಮಡದಿಯನ್ನು ಯಾವುದಕ್ಕೂ ಗೋಳಾ ಡಿಸಲಾರ ಎಂದು ನನಗೆ ನಂಬಿಕೆಯಿತ್ತು. ಆದ್ದರಿಂದ ಅನಂತಯ್ಯನ ಹೆಂಡತಿ, ಸಣ್ಣ ಗಾಗಿ ಸವೆದುಹೋಗಲು ಕಾರಣ ನನಗೆ ಬಗೆಹರಿಯಲಿಲ್ಲ. ಯಾವುದೋ ಕೊರಗು ಮನಸ್ಸಿಗೆ ಹಚ್ಚಿಕೊಂಡಿದ್ದಾಳೋ ಏನೋ ಎಂದುಕೊಂಡೆ. ಅನಂತಯ್ಯ ನನ್ನ ಕುರ್ತಿ ಗೆಯ ಮೇಲೆ ಕೂತಾಗ, ಅವನಿಗೆ ಹಳೆಯಂದರಲ್ಲಿ ಹಳೆಯ, ಜೀರ್ಣವಾದ ಬೋರ್ಡನ್ನು ನೇತುಹಾಕಿಕೊಂಡಿದ್ದ, ಮನಶಾಸ್ತ್ರಿಯನ್ನು ನೋಡುವಂತೆ ಹೇಳಿದೆ. ಏಕೆಂದರೆ ಹಳೆಯ ಬೋರ್ಡ್, ಹಳೇ ಡಾಕ್ಟರು, ಅಂದರೆ ಪಳಗಿದ ತಲೆ ಎಂದೇ ನನ್ನ ಅಭಿಪ್ರಾಯ.

ಅನಂತಯ್ಯ ಡಾಕ್ಟರನ್ನ ನೋಡಿದ್ನೋ, ಬಿಟ್ಟನೋ ಅಂಬೊದೊಂದು ನನಗೆ ತಿಳಿಯಲಿಲ್ಲ. ನನಗೂ ಕೆಲಸವಿದ್ದುದರಿಂದ ಆಕಡೆ ಹೋಗಲು ಸಾಧ್ಯವಾಗಲಿಲ್ಲ. ಒಂದುವಾರವೂ ಕಳೆಯಿತು. ಎರಡನೇ ವಾರದಲ್ಲಿ ಇದ್ದಕ್ಕಿದ್ದಂತೆ ಒಂದು ದಿನ ನಮ್ಮ ಮನೆಗೆ ಓಡೋಡಿ ಬಂದ. ನನ್ನ ಮಕ್ಕಳಿಗೆಲ್ಲಾ ನಾಥೂರಾಂ ಗೋಂದಾಜಿ ಅಂಗಡಿಯ ಫೇಡಾ ಖಿಲಾಯಿಸಿದ. ಕುಣಿದು ಕುಪ್ಪಳಿಸಿ, ನಕ್ಕು ನೆಗೆದಾಡುತ್ತಿದ್ದ. ಈ ಹೈದನನ್ನು ನೋಡಿ ನನಗೆ ಬಲು ಅನುಮಾನವಾಯಿತು. " ಎಲಾ, ಇವನಿಗೆ ಏನಾದರೂ ಹುಚ್ಚು ಹಿಡಿಯಿತೋ ? " ಎಂದುಕೊಂಡೆ. ಹೆದರಿಕೊಂಡೇ, ಮೆಲ್ಲಗೆ ಅವನನ್ನು ಚಿಕ್ಕಮನೆಯೊಳಗೆ ದೂಡಿಕೊಂಡು ಬಂದು ಕದ ಮುಚ್ಚಿದೆ. ನನ್ನ ಮುಂಜಾಗ್ರತೆಗೋಸ್ಕರ ಒಂದು ಕೈಕೋಲನ್ನು ತೆಗೆದುಕೊಂಡು ಕುಳಿತೆ.

" ಏನಯ್ಯಾ ಇದೆಲ್ಲಾ ಸಮಾಚಾರ ? ಈ ಹುಚ್ಚು ಆನಂದದ ಅರ್ಥವೇನು " ಅಂತ ಪ್ರಶ್ನಿಸಿದೆ.

" ನನ್ನ ಹೆಂಡತಿ ಈಗ ಸರಿಹೋದಳು ಕಣಯ್ಯ " ಎಂದ ಅವ ಉತ್ಸಾಹದಿಂದ.

" ಅಂದ್ರೆ ಯಾವ ಸೈಕಿಯಾಟ್ರಿಸ್ಟಿನ ಕನಸಲ್ಟ್ ಮಾಡ್ದೆ....? "

" ನನ್ನ ಅತ್ತೆ ಮಾವ ಬಂದಿದ್ರೂ..." ಎಂದ ಅವ.

" ಎಲಾ ಇವನ. ಒಂದಕ್ಕೊಂದು ಹೊಂದಾಣಿಕೆಯೇ ಬ್ಯಾಡ್ವೆ ಮಾತಿನಲ್ಲಿ. ನಾನು ಕೇಳೋದೇನು ? ಇವನು ಹರಟ್ತಿರೋದೇನು ? ಎಂದು ನನಗೆ ರೇಗಿತು. ಇದೂ ಹುಚ್ಚಿನ ಚಿಹ್ನೆಯೋ ಎಂದುಕೊಂಡೆ.

" ನಾನು ಕೇಳಿದ್ದಕ್ಕೆ ಉತ್ತರ ಹೇಳು ಅನಂತಯ್ಯಾ " ಎಂದೆ ಕೊಂಚ ಗಡು ಸಾಗಿಯೇ.

" ಅದೇ ಕಣಯ್ಯ. ನನ್ನ ಅತ್ತೆ ಮಾವ ಬಂದ ಮೇಲೆ ಅವಳ ಜೋಭದ್ರತನ ವೆಲ್ಲಾ ಹೋಗಿಬಿಡ್ತು...."

" ಅಂದ್ರೆ ಅವರನ್ನ ನೋಡಿದ ತಕ್ಷಣ ಹೋಯ್ತು ಅಂತೀಯಾ. ಇರ್ಬೇಕು ಎಷ್ಟಾದರೂ ತೌರಿನ ವಾತ್ಸಲ್ಯ..." ಎಂದೆ ನಾನು.

ಅದಕ್ಕಲ್ಲಯ್ಯ. ಅವರು ಬಂದರಲ್ಲಾ ಬಂದ ದಿವಸವೇ ಆಳುಗಳನ್ನ ಓಡಿಸಿ ಬಿಟ್ಟರು. 'ಇಬ್ಬರ ಬಟ್ಟೆ ಒಗೆಯೋಕ್ಕೆ. ಈ ಚಿಕ್ಕಮನೆ ಗುಡಿಸೋಕ್ಕೆ ಆಳು ಗಳು ಬೇರೆಯೋ' ಅಂತ ಮಗಳಿಗೆ ಮೂಗು ಮುರಿದರು. ಎಷ್ಟಾದರೂ ಗ್ರಾಮದ ಒರಟು ಜನ ಅಂತಿಟ್ಕೊ. ಸರಿ ಆಳುಗಳ ಕೆಲಸವನ್ನು ಅವಳೇ ಮಾಡ್ಬೇಕಾಯ್ತು. 'ಅಡುಗೆಗೆ ಬೇರೆ ಅಡುಗೆಯವನೇ. ಇದೊಂದು ಕೇಡು' ಅಂತ ಅವನಿಗೂ ಚೀಟಿ ಕೊಟ್ಟರು. ಹೀಗಾಗಿ ನನ್ನ ಹೆಂಡತಿ ತಲೆಯಮೇಲೆ ಎಲ್ಲಾ ಕೆಲಸವೂ ಬಿತ್ತು. ಹಿಂದೆ ಅವಳು ಗ್ರಾಮದಲ್ಲಿದ್ದಾಗ ಹತ್ತು ಜನರ ಕೆಲಸಾನ ಒಬ್ಬಳೇ ಮಾಡ್ತಿದ್ದಳು ಅಂತಿಟ್ಕೊ. ಭಾವೀಲಿ ನೀರು ಸೇದೋದ್ರಿಂದ ಹಿಡ್ದು, ಹರಿ ಒಲೆ ತೋಡಿ ನಳಪಾಕ ಇಳಿಸೋ ತನಕ ಎಲ್ಲಾ ಪ್ರಾಕ್ಟೀಸಾಗಿತ್ತು. ಆದ್ರಿಂದ ಇಲ್ಲಿ ಕೆಲಸವೇನು ಅವಳಿಗೆ ಕಷ್ಟವಿಲ್ಲ. ಕೆಲಸ ಮಾಡೋದ್ರಿಂದ, ತಿಂದ ಅನ್ನ ಕರಗಿ ಅಂದ್ರೆ ಜೀರ್ಣವಾಗಿ, ರಕ್ತಗತವಾಗಿ, ಮೈ ಕೈ ತುಂಬಿಕೊಂಡು ಈಗ ಲವಲವಿಕೆಯಾಗಿದ್ದಾಳೆ. ಇನ್ನೇನು ಯೋಚನೆಯಿಲ್ಲ " ಅಂತಂದ ಅನಂತಯ್ಯ.

ಕೆ. ಎಸ್. ಕಿಟ್ಟಿನ್

ಓದಿನೋಡಬೇಕು

ಅವತ್ತು ಯಾರೋ ಭಗವದ್ಗೀತೆಯ ಪ್ರತಿಯನ್ನು ಉಡುಗೊರೆಯಾಗಿ ಕೊಟ್ಟಿದ್ದರು.

ಅವತ್ತು ನನಗೆ ಮುಂಜಿ. ಅಲ್ಲಾಘೇ ಅಂತ ಕೂಗಿಕೊಳ್ಳುತ್ತಾ ಮಾಡಿಸಿಕೊಂಡ ಮುಂಜಿ ಅಲ್ಲಾ ! ವಟುವಿಗೆ ನೋವಿಲ್ಲದೆ ಆಗುವ ಮುಂಜಿ. ಆ ಪ್ರತಿಯನ್ನು ಪವಿತ್ರವಾಗಿ ಇಟ್ಟಿದ್ದೆ. ನನ್ನಂತಹ ಪಾಮರ ಅದನ್ನು ಮುಟ್ಟಿದರೆ ಮೈಲಿಗೆ ಆಗುತ್ತೆ ಅಂತ ಹಾಗೇ ಅಟ್ಟೆ ತೆರೆಯದೆ ಇಟ್ಟಿದ್ದೆ.

ಮೊನ್ನೆಮೊನ್ನೆ ಅದನ್ನು ಓದುಕ್ಕೆ ಶುರುಮಾಡಿದೆ. ದಿನಾಗಲೂ ಆದಷ್ಟು ಆಗಲಿ ಅಂತ ಮೇಜಿನ ಮೇಲಿಟ್ಟುಕೊಂಡು, ಮುಗಿಸಿದ ಹಾಳೆಯ ಗುರುತಿಗೆ ನವಿಲು ಗರಿ ಇಟ್ಟು, ಸಂತಸಪಟ್ಟಿದ್ದೆ.

ಬಿಂದು ಮಾಧವ ಒಂದು ದಿವಸ ಬಂದ. ಮೇಜನ್ನು ನೋಡಿದ. "ಕಡೆಗೂ ದೇವರು ಬುದ್ಧಿ ಕೊಟ್ಟನಲ್ಲ. ಭಗವದ್ಗೀತೆಯ ಪಾರಾಯಣಕ್ಕೆ ಶುರುಮಾಡಿದೆಯಲ್ಲ" ಎಂದು ಅಭಿನಂದಿಸಿದ. ಸಂಸ್ಕೃತ ಎಂ. ಎ. ಪ್ಯಾಸಾದವ, ಬಿಂದುಮಾಧವ, ಗೀತೆ ಅಂದರೆ ಗಂಗೆ ಕುಡಿದಹಾಗೆ ಅವನಿಗೆ. ನಾನೋ ಕನ್ನಡ ಕರಡಿಮರಿ. ಕನ್ನಡದ ಲಿಪಿಯಲ್ಲೇ ಗೀತೆ ಓದುವವನು, ಕನ್ನಡದಲ್ಲೇ ಅರ್ಥ ವಿವರಣೆ ಶಬ್ದ ಶಬ್ದಕ್ಕೂ ಕೊಟ್ಟಿರಬೇಕು. ಅಂತಹ ಪುಸ್ತಕವನ್ನೇ ಉಡುಗೊರೆಯಾಗಿ ಯಾರೋ ಕೊಟ್ಟಿದ್ದುದು. ಒಂದೆರಡು ಶ್ಲೋಕಗಳನ್ನು ಒಂದೆರಡು ವಾರಗಳಲ್ಲಿ ಓದಿದ್ದೆ.

ಆದರೂ ಬಿಂದು ಮಾಧವನೆದುರು ಸುಳ್ಳು ನಟಿಸಲು ಮನಸ್ಸು ಬರಲಿಲ್ಲ. ದೇವರು ಬುದ್ಧಿ ಕೊಟ್ಟ ಅಂತ ಅವ ನಂಬಿದ್ದ. ಅಲ್ಲ ಕಣಯ್ಯಾ ! ಹೀಗೆ ಹೀಗಾಯ್ತು ಎಂದು ಹೇಳ ಬಯಸಿದೆ. ಹೇಳಿದೆ.

"ಬೇಜಾರಾಗುವ ವಯಸ್ಸು ಬಂತು. ಉತ್ಸಾಹದಿಂದ ಓದಿ, ಮಾಡುವ ವಯಸ್ಸು ಮುಗಿದುಹೋಯಿತು. ಜತೆಜತೆಯವರೊಡನೆ ಹಗೂರಾಗಿ ಕಾಡಹರಟೆ ಹೊಡೆಯಬಹುದು. ಅರವಾಮೊದ್ದು ಹತ್ತಿರ ಹೋದೆ, ಅವ ಇಳಿವಯಸ್ಸಿನಲ್ಲಿ "ಕ್ರಾಸ್‌ವರ್ಡ್ ಪಸಲ್"ಗಳ ಪ್ರಭಾವದಲ್ಲಿ ಮುಳುಗಿದ್ದಾನೆ, ಹೋದಾಗಲೆಲ್ಲ" ಮುದ್ದಾದುದು. ಮೂರು ಅಕ್ಷರದ್ದು. ಯಾವುದು ?" ಎಂದು ಕೇಳುತ್ತಾನೆ. ರಮಣಿ

ಅಂದರೆ ಅಲ್ಲ ಕಣೋ ಒರಳು, ಕ್ರಾಸ್‌ವರ್ಡ್‌ನಲ್ಲಿ ಒರಳು ಅಂತ ಹುಸಿ ನಗ್ತಾನೆ. ಅವನ ಹತ್ತಿರ ಹರಟೆಗೆ ಹೋಗುವ ಹಾಗಿಲ್ಲವಲ್ಲ.


ಘಟುಮೂರ್ತಿ ಹತ್ತಿರ ಹೋದಾಗಲೆಲ್ಲ ಅವ ಖೂನಿ, ಹಾದರ, ಅತ್ಯಾಚಾರದ ಕಾದಂಬರಿಗಳಲ್ಲೇ ಮಗ್ನವಾಗಿರ್ತಾನೆ. ಹುಡುಗನಿಗಿನ್ನು ಹದಿನಾಲ್ಕು ವರ್ಷ ಕಣೋ, ಮೂರು ಧುಡುಮೀಯರು ಅವನನ್ನ ಆಟದ ಸಾಮಾನಿನ ಹಾಗೆ ಇಟ್ಟುಕೊಂಡಿದ್ದಾರೆ ಎಂದು ಅಂದು ನಗ್ತಾನೆ. ಇಷ್ಟು ಕೀಳು ಮಟ್ಟಕ್ಕಿಳಿದವನ ಹತ್ತಿರ ಏನು ಮಾತಾಡೋದಪ್ಪ.

ಸೀನು ಹತ್ತಿರ ಹೋದೆ. ಬೆಳಗಿಂದ ಸಂಜೆ ತನಕ ಅವನು "ಓದುಗರ ಪತ್ರ"ಕ್ಕೆ ಕಾಗದಗಳನ್ನು ಬರೆಯುತ್ತಲೇ ಇರುತ್ತಾನೆ. ಇವನು ಟೀಕೆ ಮಾಡದ ವಿಷಯವಿಲ್ಲ ಆಡು ಮುಟ್ಟದ ಸೊಪ್ಪಿಲ್ಲ. ಇವನ ಹತ್ತಿರ ಚಾಡಿ ಹರಟೆ ಏನು ಆಡೋದಪ್ಪ !

ಜತೆಗೆ ಯಾರೂ ಇಲ್ಲದೆ ಈ ಪುಸ್ತಕದ ಹಾಳೇನ ಮಗುಚಿ ಹಾಕುಕ್ಕೆ ಶುರು ಮಾಡಿದೆ. ನಾಲ್ಕಾರು ಶ್ಲೋಕ ಓದಿದೆ ಇನ್ನು ಓದೋಣ ಅನ್ನಿಸುತ್ತಿದೆ. ಬೇಜಾರು ಮೂಡಿಲ್ಲ. ಹೀಗೆ ನಾನು ಪಾರಾಯಣಕ್ಕೆ ಶುರುಮಾಡಿದ್ದು. ಈ ವಿಚಾರದಲ್ಲಿ ದೇವರು ಏನೂ ತಕ್ಲೀಫ್ ತೆಗೆದುಕೊಳ್ಳಲಿಲ್ಲ" ಎಂದು.

ಯಾರೂ ಜತೆಗೆ ಇರದೆ ಇದ್ದಾಗ ಗೀತೆ ಇರುತ್ತೆ, ಕಣಯ್ಯಾ ! ಅದೇ ಅದರ ಸಂದೇಶ ಎಂದ ಬಿಂದು ಮಾಧವ.

ಓದಿ ನೋಡಬೇಕು : ಆ ಸಂದೇಶ ಯಾವ ಹಾಳೆಯಲ್ಲಿದೆಯೋ ?



ಮಾಸ್ತರು—ಇನ್ಕ್ರಿಮೆಂಟ್ ಕೊಡಿ ಅಂತ ನಾನೇ ಕೇಳ್ಕೋತಾ ಇದೀನಿ. ಅಂತಹದರಲ್ಲಿ ನಿನಗೆ ಸ್ಕಾಲರ್‌ಷಿಪ್ಪನ್ನೂ ಕೊಡಿ ಅಂತ ಹೇಗೆ ಕೇಳೋದಪ್ಪ !

ಕಾಡಿದನು ಗಮಕಿ

(ಕುವೆಂಪುರವರ ಕ್ಷಮೆಗಳನ್ನು ಕೋರಿ)

ಕಾಡಿದನು ಗಮಕಿ
ವೀಳ್ಯ ಸೂಸಿದ ರಸದ ಹನಿಗಳ ಚಿಮುಕಿಸಿ
ಆ ವಾರ್ಷಿಕೋತ್ಸವದ ಬೃಹತ್ ಸಭೆಯಲಿ
ಷಡ್ಜದಲಿ ಕರ್ಣ ಕಠೋರ ಧಾಟಿಯಲಿ
ನಡುಹಗಲಲಿ
ಬಿಸಿನೀರಿನ ಚಿಲುಮೆಯುಕ್ಕಿಸಿ
ದಟ್ಟಕರಿ ಹೊಗೆಯ ಕಾರುತ್ತ
ದಿಣ್ಣೆ ರಸ್ತೆಯನೇರಲಾರದೆ
ಭೋರಿಡುವ ಬೆಂಜಿನ ಘೋರ ಘೋಷದಂದದಲಿ—ಮೈಕನು ತಬ್ಬಿ
ಮೊರೆದುಬರೆ ಗಮಕಿ ಕುಮಾರಸ್ವಾಮಿ ಯಾವೇಶವಾಣಿ
ಬೆದರಿ ಕಂಪಿಸಿತು ನಿರ್ದೋಷ ಶ್ರೋತೃಗಳ ಶ್ರೇಣಿ!

—ಹಾ. ರಾ.

ಒಂದು ಪ್ರಾತಃಕಾಲ

[ಓಡು ಹೊರಗೆ, ಓಡು ನೋಡು ಸುಂದರ ಪ್ರಾತಃಕಾಲವನ್ನು, ಸಂತೋಷ ಪಡು, ಜೀವನವನ್ನು ಸಾರ್ಥಕ ಪಡಿಸಿಕೋ ಎನ್ನುತ್ತಾರೆ ಕುವೆಂಪು! ಮಲೆಯ ಕವಿಯಕರೆ ಈ ಸೋಮಾರಿಗೆ ಎಲ್ಲಿ ಕೇಳಿಸಬೇಕು? ಎಷ್ಟೋ ದಿವಸಗಳಿಂದ ದೋಸೆಯು ಸಿಗದೆ ಸೊರಗಿ ಬೆಂಡಾಗಿದ್ದಾನೆ ಈ ವಿದ್ಯಾರ್ಥಿ. ಪಾಪ! ದೂರದ ತನ್ನ ಹಳ್ಳಿಯ ಮನೆಯನು ಓಡನ್ನೂ ನೆನಸಿಕೊಂಡು ಈ ode ನ್ನು ಹಾಡುತ್ತಾನೆ.]

ಓಡು ಒಳಗೆ ಓಡು ನೋಡು
ಮೂಡುತಿಹನು ದಿನಮಣಿ!
ಬೆಚ್ಚನೆ ಸುಡುವ ಮೈಯಮೇಲೆ
ಕರಗುತಿಹವು ಘೃತಮಣಿ!
ಸಗ್ಗದ ದೇವತೆ ನೆಲಕೆ ಬಿದ್ದು
ರುಚಿ ರುಚಿ ದೋಸೆ ಯಾಗಿದೆ!
ಭವಿಯ ಬಾಯ ಸಂತೋಷಕೆ
ರಸದ ಮಡುವೇ ಆಗಿದೆ!

—ಹಾ. ರಾ.

ಪ್ರಮಿಳಾ ದರ್ಬಾರು

॥ ಶ್ರೀ ಮಾರಿಕಾಂಬಾ ಪ್ರಸನ್ನ ॥

ಶಿರಸಿ

ಕ್ಷೇಮ ? ತಾ...............

ತೀರ್ಥರೂಪು ಸಮಾನರಾದ ಹೆಣ್ಣುಕೊಟ್ಟು, ಶಿರಸಿಯಲ್ಲಿ ಕೆಲಸವನ್ನೂ ಕೊಡಿಸಿ ಕಳಿಸಿದ ಮಾವಯ್ಯನವರಲ್ಲಿ ನಿಮ್ಮ ಖಾಸಾ ಅಳಿಯನೂ, ಶ್ರೀಮಂತಿ ಕಾಳಮ್ಮನ ಪತಿರಾಯನೂ ಆದ ವಾಮನಮೂರ್ತಿಯು ಮಾಡುವ ದೊಡ್ಡ ನಮಸ್ಕಾರ. ಅಯ್ಯಾ ಮಾವಯ್ಯ, ನಾನು ಏನು ಅಪರಾಧ ಮಾಡಿದ್ದೇನೆ ಎಂದು ಈ ಸಹಧರ್ಮಿಣಿ ಈ ರೀತಿ ನನ್ನನ್ನು ಸಾಕ್ಷಾತ್ ಕಾಳಿಯಂತೆಯೇ ಕಾಡುತ್ತಿರುವಳೋ ತಿಳಿಯದು.

ಆದರೂ ನಾನು ಇನ್ನೂ ತಾಳ್ಮೆಗೆಟ್ಟಿಲ್ಲ. 'ಆದರೂ' ಎಂಬುದರ ಅರ್ಥವೇನು? ಎಂದು ನೀವು ಸಂದೇಹಪಡಬಹುದು, 'ಇನ್ನೂ ತಾಳ್ಮೆಗೆಟ್ಟಿಲ್ಲ' ಎಂದಾಗ ತಾಳ್ಮೆಗೆಡುವುದಕ್ಕೆ ಇನ್ನೂ ಕಾಲಾವಕಾಶ ಎಷ್ಟಿದೆ? ಎಂಬ ಪ್ರಶ್ನೆಯೂ ಬರಬಹುದು. ಬರಲಿ, ಬರಬೇಕಾದ್ದೆ. ಹಾಗೆ ಬಂದರೂ ನಾನು ಮತ್ತೆ ಒತ್ತಿ ಹೇಳುವುದೇನೆಂದರೆ 'ಆದರೂ ನಾನು ಇನ್ನೂ ತಾಳ್ಮೆಗೆಟ್ಟಿಲ್ಲ'—ಎಂಬುದು ಮಾತ್ರ.

"ಎಲೈ ಅವಿವೇಕಿ—ವಿಷಯವೇನು ತಿಳಿಸು—ಎಂದು ಕೇಳುತ್ತೀರಿ. ನಿಜ. ಆದರೆ ಒಂದೇ ಮಾತಿನಿಂದ ನಾನು ಹೇಳಬೇಕೆಂದರೆ ನಾನು ವಿವೇಕಿಯಾಗಿದ್ದಿದ್ದರೆ ನಿಮ್ಮ ಕುಮಾರಿ ಕಾಳಿಕಾದೇವಿಯನ್ನು ನಾನು ಆಗುತ್ತಿದ್ದೆನೆ ?

ವಿಷಯವಿಷ್ಟೆ ಮಾವಯ್ಯ—ಶ್ರೀಮಂತಿ ಇಂದಿರಾ ಗಾಂಧಿಯವರು ಆಳುವ ಪಾರ್ಟಿಯ ಮುಂದಾಳಾಗಿ ಪ್ರಧಾನಿ ಪಟ್ಟಕ್ಕೆ ಆಯ್ದು ಬಂದಲಾಗಾಯ್ತು ಈ ಹೆಣ್ಣು ಹೆಂಗಸಿನ ರೀತಿಯೇ ಬದಲಾಗಿ ಹೋಗಿದೆ.

"ನಾವೇ ಈ ರಾಜ್ಯವನ್ನು ಆಳ್ತಿರೋರು ಎಚ್ಚರ ? " ಎಂದು ಚುಚ್ಚುಮಾತಿನಲ್ಲಿ, ರೇಡಿಯೋದಲ್ಲಿ ಶ್ರೀಮಂತಿ ಇಂದಿರಾ ಅವರು ಮುರಾರ್ಜಿ ಅವರಿಗೆ ಮಣ್ಣು ಮುಕ್ಕಿಸಿದರು ಎಂದು ಕೇಳಿದಾರಭ್ಯ, ನನ್ನನ್ನು ಇರಿಯುತ್ತಿದ್ದಾಳೆ. ಎಲಾ ದೇಶದ ಐಕ್ಯತೆಗೆ ಒಗ್ಗಟ್ಟಿಗೆ ಒಂದು ಕಳೆ ಬರಬೇಕಾದರೆ ಒಮ್ಮತದಿಂದ ನಾಯಕರ ಆಯ್ಕೆ ಆಗಬೇಕು ಎಂದು ಕಾಮರಾಜಯ್ಯನವರು ಶ್ರಮಿಸಿದರೂ ಮುರಾರ್ಜಿ ಸೆಡ್ಡು ಹೊಡೆದು ಚುನಾವಣೆಯ ಅಖಾಡಕ್ಕೆ ಈ ಇಂದಿರಾ ದೇವಿಗೆ ಸವಾಲು ಹಾಕಿದರು. ಅಯ್ಯೊ—

ಹಾಗಾದಮೇಲೆ ನಿಮ್ಮ ಮಗಳು ನನ್ನ ಮೇಲೆ ಏತಕ್ಕೆ ಕೆಂಡ ಕಾರಬೇಕೋ ತಿಳಿಯದು. ಭಯ ಭಕ್ತಿಗಳಿಂದ ಚುನಾವಣೆ ದಿವಸ ಮಡಿಯಾಗಿ ಮಿಂದು ಒದ್ದೆಬಟ್ಟೆಯಲ್ಲೇ ಈ ಊರಿನ ಮಾರಿಕಾಂಬಾ ದೇವಸ್ಥಾನಕ್ಕೆ ಹೊರಟಳು.

"ಎಲ್ಲಿಗೆ ಹೊರಟೆ ?" ಎಂದು ಕೇಳಿದೆ.

—ದುರ್ಗಾದೇವಿಯಂತೆ ಕಿಡಿ ಕಿಡಿ ಕಣ್ಣು ಬೀರಿದಳು, ಚಾಮುಂಡಿಯಂತೆ ನಾಲಿಗೆ ಹರಿತಮಾಡಿಕೊಂಡಳು. ನನ್ನನ್ನು ಬಲಿ ಹುಯ್ಯಲು ತಯಾರುಮಾಡಿಕೊಂಡಿರುವ 'ಕೋಣವೊ' ಎಂಬಂತೆ ನೋಡುತ್ತಾ

"ಮಾರಿಕಾಂಬೆಗೆ ಕೋಣವನ್ನೇ ಬಲಿಕೊಡಬೇಕಾಗಿದೆ ಬರ್‍ತೀರೇನು ?"

—ಎಂದು ಕೇಳಿದಳು "ಉಪ್ಪೋ" ಎಂದು ಕಿರುಚಿದೆ.

"ಒಂದು ಒಳ್ಳೇ ಕೆಲಸ ದೇವರ ಕೆಲಸಕ್ಕೆ ಹೊರಟಿರೋವಾಗ ಶಕುನ ಪಕ್ಷಿಹಾಗೆ 'ಎಲ್ಲಿಗೆ ಹೊರಟೆ ?' ಅಂತ ಕೇಳೋಕೆ ನಾಚಿಕೆ ಆಗೂಲ್ವೇ ! ಹೊರಡ್ರಿ ಮಾರಿಕಾಂಬೆ ದೇವಸ್ಥಾನಕ್ಕೇ "

—ಎಂದು ನನ್ನನ್ನು ತಡವಿಕೊಂಡಳು ನಿಮ್ಮ ಮಗಳು ಕಾಳಿಕಾಂಬಾ. ಬೆದರುವವನಮೇಲೆ ಕಪ್ಪೆ ಎಸೆದರೂಂತ ಗಾದೆ ಕೇಳಿಲ್ವೆ ಮಾವಯ್ಯಾ ಹಾಗೆ ನನ್ನ ಸ್ವಭಾವ.. ಮೊದಲೇ ನಾನು ಭಯಸ್ಥ ಮಾನ ಮರ್ಯಾದೆಗೆ ಹೆದರೋ ಗಂಡು... ಈ ಹೆಣ್ಣು ರಾಜಮಾರ್ಗದಲ್ಲಿ ನನ್ನ ಮೂದಲಿಸುತ್ತಾ ಬಲಿ ಹುಯ್ಯಲು ಕೋಣನನ್ನು ಎಳೆದುಕೊಂಡು ಹೋಗುತ್ತಿರುವಳೋ ಎಂಬಂತೆ ಎಗರಲಾಡುತ್ತಾ ಹೊರಟರೆ ನನ್ನ ಗತಿ ಏನು ? ಒಬ್ಬಾತನೆ ಇದ್ದಾಗ ಬೇಕಾದ್ದು ಬೈಲಿ ನಮ್ಮ ಅಪರಾಧ ದೊಡ್ಡ ದಾಗಿದ್ದರೆ ಕ್ಯಾಕರಿಸಿ ಉಗೀಲಿ ಆದರೆ ನಾಲ್ಕು ಮತ್ತೊಂದು ಮಂದಿ ಇರುವಾಗ ನಾನು ಅಪಮಾನ ತಡೆಯಲಾರೆ. ನನ್ನ ಮಾನದ ಪ್ರಶ್ನೆ ಇದು. ಅದರಿಂದಾಗಿ ತಲೆ ತಗ್ಗಿಸಿಕೊಂಡು ತುಟಿ ಪಟಕ್ ಎನ್ನದೆ ಆ ಮುತ್ತೈದೆಯನ್ನು ಹಿಂಬಾಲಿಸಿದೆ.

ಮಾವಯ್ಯ ಈ ಮಡಿಯ ವಿಶೇಷ ಪೂಜೆ ಯಾತಕ್ಕೆ ಗೊತ್ತಿದೆಯೇ ? ಇಂದಿರಾಗಾಂಧಿ ಅವರೇ ದೇಶದ ನಾಯಕಿಯಾಗಿ ಪ್ರಥಮ ಮಹಿಳಾ ಪ್ರಧಾನಿಯಾಗಿ ಆಯ್ಕೆಬರಲಿ ಎಂದು ಮಾರಿಕಾಂಬೆಗೆ ಈ ಹೆಣ್ಣು ಪೂಜೆಮಾಡಿ ಭಕ್ತಿಯ ಲಂಚ ಕೊಡುತ್ತಿದ್ದಾಳೆ.

"ಇನ್ನು ನಿಮ್ಮ ದರ್ಬಾರೆಲ್ಲಾ ಮುಗಿಯಿತು ನಮ್ಮದೇ ರಾಜ್ಯ ಹುಷಾರ್ ಹುಷಾರ್..."

—ಎಂದು ಅವರು ಚುನಾಯಿತರಾದರೆಂದು ತಿಳಿದ ಕೂಡಲೆ ಬೆದರಿಸಿದಳು 'ದೇವಿಯು ಭಕ್ತರಿಗೆ ಯಾವತ್ತೂ ಅವರ ವರಗಳನ್ನು ದಯಪಾಲಿಸದೆ ಇರುವುದಿಲ್ಲ ನೋಡಿದಿರಾ ಜಗನ್ಮಾತೆ ಧಾತ್ರಿದಾತೆ ಹ್ಯಾಗೆ ನಮ್ಮ ಪೈಕಿ ಒಬ್ಬಾಕೆಯೇ ವಿಜಯ

ವೈಜಯಂತಿಮಾಲೆ ಹಾಕಿಕೊಂಡು ರಾಜ್ಯಭಾರ ಮಾಡಲು ಹರಸಿದ್ದಾಳೇ .." ಎಂದು ಮೂಗು ಕೆರೆಯುವಳು.

ನಮ್ಮ ಕಾನ್ಸ್ಟಿಟ್ಯೂಷನ್ನಿನಲ್ಲಿಯೇ ಹೆಂಗಸರಿಗೆ ಸಮಾನ ಹಕ್ಕು ಕೊಟ್ಟಿದ್ದೇವೆ ಇದರಲ್ಲಿ ನನಗೆ ಯಾವ ಹೆಚ್ಚುಗಾರಿಕೆಯೂ ಕಾಣದು. ಈ ಕಾಳಮ್ಮನೇ ಕಿರೀಟ ಇಟ್ಟುಕೊಂಡಹಾಗೆ ತನ್ನ ಜಾತಿಯಾದ ಹೆಣ್ಣು ಜಾತಿಯೇ ಆಳುತ್ತಿರುವುದಕ್ಕೆ ಸಡಗರ ಪಡಬೇಕೋ ತಿಳಿಯದಾಗಿದೆ.

ನಾನು ಆಳಿಸಿಕೊಳ್ಳುವವನಂತೆ ಆಕೆ ಆಳುವವಳಂತೆ, ನನಗೆ ಬಹು ಸಂಕಟವಾಗುತ್ತಾ ಇದೆ. ನಿಜ ಅವಳು ಸ್ಕೂಲ್ ಮೇಡಂ ಇರಬಹುದು ನಾನೂ ಕ್ಲಾರ್ಕ್ ಅಲ್ಲವೆ ? ಈ ಪರಿಜ್ಞಾನ ನಿಮ್ಮ ಮಗಳಿಗೆ ಬೇಡವೆ !

ಮಾವನವರೇ ಈ ಬಾಧೆ ತಡೆಯಲಾರೆ. ಅವಳು ಮಹಿಷಾಸುರನನ್ನು ತಿವಿದ ತ್ರಿಶೂಲ ದಂತೆ ನನ್ನನ್ನು ವಾಕ್ ಪ್ರಹಾರಗಳಿಂದ ಕೊಲ್ಲುತ್ತಿದ್ದಾಳೆ. ಇದು ಗಂಡು ಜಾತಿಗೇ ಸವಾಲು ಹಾಕಿದಂತೆ ಆಗಿ ನಾನು ತಲೆ ಎತ್ತಿಕೊಂಡು ಧೈರ್ಯವಾಗಿ ಓಡಾಡುವುದೇ ಕಷ್ಟವಾಗಿದೆ.

ದಯವಿಟ್ಟು ನೀವು ಒಂದು ಉಪಕಾರ ಮಾಡಬೇಕು ನನಗೆ ಈ ಊರಿನಿಂದ ವರ್ಗಮಾಡಿಸಿಕೊಡಿ ಕೆಲಸ ಕೊಡಿಸಿದವರಿಗೆ ಇದು ದೊಡ್ಡ ವಿಷಯವಲ್ಲ ಒಹುದೂರ. .ಆಕೆ ಬರಲಿಕ್ಕೆ ಮೂರು ದಿನದ ಪ್ರಯಾಣವಾಗಬೇಕು ಅಂತಹ ಊರು ಬಿದರ್‌ಗೋ ಚಾಮರಾಜನಗರಕ್ಕೋ ಚಿತ್ರದುರ್ಗ ತಾಲೂಕಿನಲ್ಲಿ ದೊಡ್ಡ ಗುಡ್ಡಗಳ ನಡುವಿನ ಚಿಕ್ಕ ಹಳ್ಳಿಗೋ ಎಲ್ಲಿಗೋ. ನಾನು ಮೊದಲು ಈ ಪ್ರಾಣಿಯ ಕಾಟದಿಂದ ಪಾರಾಗಬೇಕಾಗಿದೆ.

ಕೂಡಲೆ ಉತ್ತರಿಸಿ

ಇತಿ ನಿಮ್ಮ ನಿರ್ಭಾಗ್ಯ ಅಳಿಯ
ವಾಮನಮೂರ್ತಿ

*   *   *   *

ಶ್ರೀ

ಕಳ್ಳಂಬೆಳ್ಳ
ತಾ॥...............

ಚಿ॥ ಸೌ॥ ಹ॥ ಕು॥ ಶೋ॥ ಕಾಳಮ್ಮನಿಗೆ ನಿಮ್ಮ ತಾಯಿಯ ಆಶೀರ್ವಾದಗಳು ನಿನ್ನ ಯಜಮಾನ್ರು ಏನೇನೋ ತೋಡಿಕೊಂಡು ಪತ್ರ ಬರೆದಿದ್ದರು. ಅದನ್ನು ಈ ಕಾಗದದ ಸಂಗಡ ಹಿಂದಿರುಗಿಸಿದ್ದೇನೆ. ನೀನೇ ಓದಿಕೊ.

ನಿನ್ನ ತಂದೆಯಂವರಿಗೆ ಬರಂವ ಎಲ್ಲಾ ಪತ್ರಗಳೂ ಮೊದಲಂ ನನಗೆ ಬಂದೇ ನಂತರ ಅವರಿಗೆ ತಲಂಪುತ್ತದೆ. ಈ ಪದ್ಧತಿಯಂನ್ನು ನೀನೂ ಜಾರಿಗೆ ತಂದಿರಬಹಂದು ನನಗೆ ನಗಂಕಣೆ ಕಾಳಿ ಈ ಗಂಡಸರು ಹ್ಯಾಗೆ ಕಾಟಕ್ಕೆ ತಕ್ಕಂತೆ ಕುಣಿಯುತ್ತವೆ ಅನ್ನೋಕೆ...ಅಲ್ಲಾ ನಮ್ಮ ಇಂದಿರಾ ಪಟ್ಟಕ್ಕೆ ಬಂದ ಕೂಡಲೇ ನಿನ್ನ ತಂದೆಯಂವರು ಬಕೀಟಿನಲ್ಲಿ ನೆನಸಿ ಹಾಕಿದ ಸೀರೆಗಳನ್ನೆಲ್ಲಾ ಒಗೆದು ಅಣೆಯಾಗಿ ಒಣಹಾಕಿ ಬಿಡೋದೆ !!! ನನಗೇ ನಾಚಿಕೆ ಆಯ್ತಮ್ಮ

"ಇನ್ನುಮೇಲೆ ನನಗೆ ತಿಳಿಸದೇ ನೀವು ಹೀಗೆಲ್ಲಾ ಒಗೆಯಂಬಾರದಂ" ಎಂದು ಸಿಟ್ಟುಮಾಡಿದೆ

"ಆಗ್ಲಿ ಮೇಡಂ ನೀವು ಹ್ಯಾಗೆ ಹೇಳಿದರೆ ಹಾಗೆ" ಅಂತ ಕಾಫಿ ಒಲೆ ಹೊತ್ತಿಸಿ ನೀರು ಕಾಯಿಸಲಿಕ್ಕೆ ಇಟ್ಟರು. ನೀನೂ ನನ್ನ ಮಗಳು ಆ ವಾಮನ ಮೂರ್ತಿಗಳು ನಿಮ್ಮ ತಂದೆ ಹತ್ತಿರ ಪಾಠ ಕಲಿತರೆ ಒಳ್ಳೆಯದು. ಯಾತಕ್ಕಂತೆ ಈಗ ವರ್ಗ ? .. ನಾನು ಬೇಡ ಅಂತ ನಿರ್ಧರಿಸಿ ಇವರು ಪ್ರಯತ್ನಮಾಡದ ಹಾಗೆ ಮಾಡಿದ್ದೇನೆ ನೀನು ಹೆದರಬೇಡ ಧೈರ್ಯವಾಗಿ ಆಡಳಿತ ನಡೆಸು.

ಒಂದು ಗುಟ್ಟು ..ಹಗ್ಗವನ್ನು ತೀರಾ ಎಳೆದರೆ ಹರಿದು ಹೋಗುತ್ತದೆ . ಅದರ ಶಕ್ತಿಗೆ ತಕ್ಕಷ್ಟು ಬಲಕೊಟ್ಟು ಎಳೆದಾಡು. .ಈ ಆಡಳಿತ ಬಹು ಮೋಜು ಅಲ್ಲವೆ? ನೀವು ಹೆಂಡ್ತಿ ಗಂಡ ಚೆನ್ನಾಗಿರಬೇಕಾದರೆ ಗಂಡಂದಿರ ಮೇಲಿನ ಹತೋಟಿ ಬಲವಾಗಿರಲಿ....ತಲೆ ಎಲ್ಲೇ ಇರಲಿ ಜುಟ್ಟು ಮಾತ್ರ ನಿನ್ನ ಕೈಲೇ ಇರಲಿ...ಅಳಿಯದೇವರು ತಲೆ ಹರಟೆ ಮಾಡಿದರೆ ಕೂಡಲೇ ಬರಿ ಎಂತಹ ಹರಟೆ ಅದು ಅದಕ್ಕೆ ತಕ್ಕ ಮದ್ದು ಸೂಚಿಸುವೆ.

ದೇಶದಲ್ಲಿ ಶಾಂತಿ ನೆಲಸಲಿಕ್ಕೆ ಹೆಂಗಸರ ಆಡಳಿತಕ್ಕಿಂತ ಮತ್ತೊಂದಿಲ್ಲ. ಇದನ್ನು ನಿನ್ನ ಗಂಡನಿಗೆ ಹೇಳು.

ಇತಿ ಆ॥ಗಳು
ನಿಮ್ಮಮ್ಮ ರುದ್ರಮ್ಮ

—ದಾಶರಥಿ ದೀಕ್ಷಿತ್.

ಎಲೆ ಪಿಲ್ಲು
ಮಂಜ್ರೇಕರ್‌ದು ಪಟಾಡಿಗಳ ಜಾತಿಗೆ
ಸೇರ್ದೆನೆಂದು ಗರ್ವಿಸಬೇಡ
ಕಾಮೆಂಟ್ರಿ ಕೇಳುವುದರಲಾಯ್ತು
ನಿನ್ನಯ ಶೌರ್ಯಂ !

ಬ್ಲಡ್ ಪ್ರೆಷರ್

ಎರಡು ಹೆಸರುಬೇಳೆ ದೋಸೆ ತರಿಸಿದ. ಪಲ್ಯ ತರಿಸಿದ. ಉಪ್ಪು ತರಿಸಿದ. ದೋಸೆ ಮೇಲೆ ಉಪ್ಪನ್ನು ಉದಾರವಾಗಿ ಉದುರಿಸಿದ. ಪಲ್ಯ ಸೇರಿಸಿಕೊಂಡು ಮುಕ್ಕಕ್ಕೆ ಶುರುಮಾಡಿದ ಆಮೇಲೆ ಎರಡು ಉದ್ದಿನ ವಡೆ ಸಾಂಬಾರು ಮುಗಿಸಿದ ಕಾಫಿ ಜತೆಗೆ ಅಂತ ಎರಡು ಪ್ಲೇಟು ಉಪ್ಪೇರಿ ಇಟ್ಟುಕೊಂಡು ಪೂರ್ಣಾಹುತಿ ಕೊಟ್ಟ

ನನ್ನ ಎದುರಿಗೆ ಕುಳಿತಿದ್ದ. ೫೦-೫೫ ರ ಪ್ರಾಯ ತಲೆಯ ಭಟ್ಟ ತಲೆಯಾಗುತ್ತಿತ್ತು. ಹೊಟ್ಟೆ ಸುಮಾರು ಏಳು ತಿಂಗಳ ದಫೂತಿ ಇತ್ತು. ತಿನ್ನುವಾಗಲೇ ಮೇಲುಸಿರು ಎಳೆದುಕೊಂಡಂತೆ ಕಾಣಿಸುತ್ತಿತ್ತು.

ಒಂದು ಬಟ್ಟಲು "ಲೈಟ್ ಚಾ" ವನ್ನು ಚಮಚ ಚಮಚವಾಗಿ ಕುಡಿಯುತ್ತಾ ಕುಳಿತಿದ್ದೆ. ಬೆಳವಳಿಗೆ ದೇಹರಚನೆಯಲ್ಲಿ, ಅವನ ಸಾಕ್ಷಾತ್ ಪ್ರತಿಬಿಂಬ ನಾನು. ನನ್ನ ಪ್ರತಿಬಿಂಬ ಅವನು. "ಬ್ಲಡ್ ಪ್ರೆಷರ್ ಬರಬಹುದು, ಹುಷಾರಾಗಿರಿ" ಅಂತ ನಮ್ಮ ಸೆಣಕಲ ಡಾಕ್ಟರು ಹುಷಾರ್ ಕೊಟ್ಟಾಗಿನಿಂದ, ಕಣ್ಣೀರಿನ ರುಚಿ ಇರುವ ಲೈಟ್ ಚಹಾ ಕುಡಿಯುತ್ತಿದ್ದೆ ಅದೇ ನನ್ನ ಟಿಫನ್. ಈ ವಯಸ್ಸಿನಲ್ಲಿ ಹುಷಾರಾಗಿರದೆ ಇದ್ದರೆ ಆ ಸೆಣಕಲ್ ಡಾಕ್ಟರು ಹೆದರಿಸಿದ ಹಾಗೆ ಬ್ಲಡ್ ಪ್ರೆಷರ್ ಏರಿಬಿಟ್ಟರೆ, ಆ ಮೇಲೆ ಲಕ್ವ ಹೊಡೆದುಬಿಟ್ಟರೆ, ಬಿದ್ದಲ್ಲೇ ಬಿದ್ದಿರಬೇಕಾಗುತ್ತಲ್ಲ! ಮೈ ಒರೆಸಬೇಕಾದರೆ ಘಟಾನ ಇತ್ತ ಹೊರಳಿಸಬೇಕಾದರೆ ನಾಲ್ಕು ಜನ ಬೇಕಾಗುತ್ತಲ್ಲಾ! ಅಷ್ಟೆಲ್ಲಾ ಖರ್ಚು ಹೇಗೆ ಮಾಡೋದು? ಹೀಗೆಲ್ಲಾ ಯೋಚಿಸಿ ನಾನು ಲೈಟ್ ಚಹಾ"ವನ್ನು ಚಮಚ ಚಮಚವಾಗಿ ತೊಟ್ಟು ತೊಟ್ಟಾಗಿ ಕುಡಿಯುತ್ತಿದ್ದರೆ, ಈ ಧಡಿಯ ಎದುರಲ್ಲಿ ಕೂತು ಪುಷ್ಕಳ ತಿಂತಿದಾನಲ್ಲ! ಯಾವ ಡಾಕ್ಟರೂ ಇವನಿಗೆ ಹುಷಾರ್ ಕೊಟ್ಟಿಲ್ಲವೇ? ಎಂದು ಒಂದು ತರಹ ಹೊಟ್ಟೆಕಿಚ್ಚಿನಿಂದ ಮರುಕಪಡುತ್ತಿದ್ದೆ.

ಸೇತುಮಾಧವ ಅಷ್ಟುಹೊತ್ತಿಗೆ ಆ ಹೋಟಲಿಗೆ ಬಂದ, ಸುಂಟರಗಾಳಿ ಬಂದ ಹಾಗೆ ಅವನು ಬರೋದು ದಡಬಡಗುಟ್ಟಿಕೊಂಡು ಇದ್ದವರನ್ನೆಲ್ಲಾ ಹಲೋ ಹಲೋ ಮಾತನಾಡಿಸಿಕೊಂಡ . ಶಿವಪೂಜೇಲಿ ಕರಡಿ ನುಗ್ಗಿದಹಾಗೆ ನುಗ್ಗುವ ಜಾಯಮಾನ. ಅವನ ಪರಿಚಯವಿಲ್ಲದೆ ಇರುವ ಜನ ನಮ್ಮೂರಿನಲ್ಲೇ ಇಲ್ಲ. ವಿಮಾ ಯೋಗಿ ಆತ, ನನ್ನ ನೋಡಿದ "ಏನಮ್ಮಾ! ಯಥಾಪ್ರಕಾರ 'ಲೈಟ್ ಚಾ" ಅಂತ ಕಣ್ಣುಮಿಟುಕಿಸಿದ. ಅತ್ತ ನೋಡಿದ. "ಓಹೋ! ಭೀಮಯ್ಯನವರು! ಇದೇನು ಮೋಜು! ಹೋಟಲ ತಿಂಡಿ ತಿನ್ನುತ್ತಿದ್ದೀರಲ್ಲ!" ಎಂದು ಆ ಮೇಜಿನ ಬಳಿ ಹೋಗಿ ಕುಳಿತ. "ಅಯ್ಯಾ! ಪ್ರಸಾದ! ಆ ಲೈಟ್ ಚಾವನ್ನು ಇಲ್ಲಿಯೇ ಕುಡಿಯೋವಂತೆ. ಬಾ! ಭೀಮಯ್ಯನವರ ಪರಿಚಯವೂ ಆದ ಹಾಗೆ ಆಗುತ್ತೆ" ಎಂದು ನನ್ನನ್ನು ಕರೆದ.

ಏನಾದರೂ ನೆಪ ಸಿಕ್ಕಿದರೆ ಆತನ ಹತ್ತಿರ ಹೋಗಿ "ಸ್ವಾಮೀ, ನನಗೆ ಹೀಗೆ ಹೀಗೆ ಬ್ಲಡ್ ಪ್ರೆಷರ್ ಭಯ ಹಿಡಿಸಿದಾರೆ, ಸೆಣಕಲು ಡಾಕ್ಟರು. ನನ್ನ ಹಾಗೆ ನೀವೂ "ಬ್ಲೊ" ತುಂಬಿದವರ ಹಾಗೆ ಕಾಣಿಸ್ತೀರಿ. ಅದರ ಹಾಗೆಯೇ ತೇಗಂತ್ತಾ ಇದ್ದೀರಿ. ನಿಮ್ಮ ಒಳ್ಳೆಯದಕ್ಕೆ ಹೇಳ್ತೀನಿ, ತಿನ್ನೋದು ಕಡಿಮೆ ಮಾಡಿ. ಉಪ್ಪು ಸೋಕಿಸಬೇಡಿ, ನೀವು ಉಣ್ಣುವ ಪದಾರ್ಥಗಳಿಗೆ, ಏನು ಕುಡಿದರೂ "ಲೈಟ್"ಆಗಿರಲಿ.

ಎಂದು ಅವರಿಗೆ ಬುದ್ಧಿವಾದ ಹೇಳಬೇಕು ಅಂತ ತೀವ್ರ ಆಸೆ. ನನ್ನ ಮನಸ್ಸಿನಲ್ಲಿ ಹೆಡೆಯಾಡಿಸುತ್ತಿದ್ದ ಆಸೆಗಳನ್ನೆಲ್ಲಾ ನಾನು ಅದುಮಿ ಹಿಡಿದು ಕೊಂಡಿದ್ದರೆ, ಈತ ನನ್ನೆದುರಿಗೆ ಆ ಆಸೆಗಳನ್ನೆಲ್ಲಾ ಪೂರೈಸಿಕೊಳ್ಳುತ್ತಿದ್ದಾನಲ್ಲ ಅಂತ ಅಸಾಧ್ಯ ಹೊಟ್ಟೆಕಿಚ್ಚು, ನನಗೆ. ನನ್ನಹಾಗೇ ಅವನೂ ಬಾಲ ಕತ್ತರಿಸಿಕೊಂಡರೆ ನನಗೆಷ್ಟೋ ಸಮಾಧಾನ ಆಗುತ್ತಿತ್ತು.

ಆದುದರಿಂದಲೇ ಸೇತುಮಾಧವ ಕರೆದಾಗ ತತ್‌ಕ್ಷಣ ಲೈಟ್ ಚಾ ಬಟ್ಟಲನ್ನು ಎತ್ತಿಕೊಂಡು ಆತನ ಮೇಜಿನ ಬಳಿಗೆ ಹೋದೆ. ನಮ್ಮಿಬ್ಬರ ಪರಸ್ಪರ ಪರಿಚಯು ವನ್ನು ಸೇತುಮಾಧವ ಮಾಡಿಸಿದಮೇಲೆ. "ಭೀಮಯ್ಯ! ಹೋಟಲಿಗೆ ಬಂದ ಕಾರಣ ತಿಳಿಸಲೇ ಇಲ್ಲವಲ್ಲ; ಹೋಟಲುಗಳಲ್ಲಿ ಕೊಳೆ ಗಲೀಜು ಹೆಚ್ಚು, ರುಚಿ ಕಡಿಮೆ, ಬೆಲೆ ವಿಪರೀತ, ಬೇನೆ ಖಂಡಿತ" ಅಂತ ಯಾವಾಗಲೂ ಎಲ್ಲರಿಗೂ ಉಪದೇಶ ಮಾಡ್ತಿದ್ದೋನು, ನೀನೇ ಹೋಟಲಿಗೆ ಬಂದರೆ?" ಎಂದು ಅಚ್ಚರಿಯನ್ನು ಸೂಚಿಸಿದ.

"ಬ್ಲಡ್ ಪ್ರೆಷರ್" ಅಂದ, ಭೀಮಯ್ಯ, ಎರಡೇ ಮಾತಿನ ಉತ್ತರ. ಬ್ಲಡ್ ಪ್ರೆಷರ್ ಅಂತ ತಿಳಿದಿದ್ದ ಭೀಮಯ್ಯ ಹೀಗೆ ತಿಂತಾನಲ್ಲಾ ಅಂತ ನನಗೆ ಬಲು ಭಯ ವಾಯಿತು. ನನಗೇ ಲಕ್ವಾ ಹೊಡೆದುಬಿಡುತ್ತೇನೋ ಎನ್ನುವ ತರಹ ತಲೆ ಘೇರಿ ತಿರುಗಿತು. ಮಾತೇ ಹೊರಡಲಿಲ್ಲ, ತೊಟ್ಟು ತೊಟ್ಟಾಗಿ ಲೈಟ್ ಚಾ ಅನ್ನು ನಾಲಿಗೆಗೆ ಬಿಟ್ಟು ಕೊಂಡೆ.

"ಬ್ಲಡ್ ಪ್ರೆಷರ್ ಬಂದವರು ಪಥ್ಯವಾಗಿರಬೇಡವನಯ್ಯಾ!" ಎಂದು ಸೇತುಮಾಧವ ಕಾತುರದಿಂದ ಕೇಳಿದ. ಎರಡೇ ವರ್ಷಗಳ ಹಿಂದೆ ಭೀಮಯ್ಯನಿಗೆ ೫೦,೦೦೦ ಕ್ಕೆ ಜಬರ್ದಸ್ತಿ ಮಾಡಿ ವಿಮಾಮಾಡಿಸಿದೆ ಎಂದು ನನ್ನ ಹತ್ತಿರ ಅವತ್ತೇ ಹೇಳಿದ್ದ. ನೀನೂ ಮಾಡು ಅಂತ ಪುಸಲಾಯಿಸುತ್ತಲೇ ಇದಾನೆ. ಸೇತುಮಾಧವನ ಕಾತರ ನನಗೆ ಅರ್ಥವಾಯಿತು. ಭೀಮಯ್ಯ ಘಟ ಒಪ್ಪಿಸಿಬಿಟ್ಟರೆ ಸೇತುಮಾಧವನನಿಗೆ ಇನ್ಶೂರೆನ್ಸ್ ಸೂತಕ ಬಡಿಯುತ್ತೆ.

"ಪಥ್ಯವೇ ಕಣಪ್ಪ! ಕಠಿಣ ಪಥ್ಯ" ಎಂದು ಖಿನ್ನವಾಗಿ ಭೀಮಯ್ಯ ಹೇಳಿದ. ಎರಡು ಉಪ್ಪೇರಿ ಬಾಯಿಗೆ ಹಾಕಿಕೊಂಡು, ಒಂದು ಗುಟುಕು ಕಾಫಿ ಬಾಯಿಗೆ ಇಳಿಸಿದ.

ನನಗೆ ತಲೆ ತಿರುಗಿತು. ನನ್ನೆದುರಿಗೇ ಬ್ರಹ್ಮಪಿಶಾಚಿ ಬಡಿದವರು ಸಿಕ್ಕಿದನ್ನು ಮುಕ್ಕುವ ಹಾಗೆ, ಈತ ಹೆಸರಕಾಳು ದೋಸೆ, ಉದ್ದಿನವಡೆ ಸಾಂಬಾರು ಎಲ್ಲವನ್ನು

ಮುಗಿಸಿದ್ದಾನೆ. ಪಥ್ಯವೇ ಕಣಪ್ಪ ಅಂತ ಸಾಧುಹಸುವಿನ ತರಹ ಹೇಳ್ತಾನಲ್ಲಾ ಅಂತ ಭ್ರಮೆ ಆವರಿಸಿತು.

"ಮನೇಲಿ ಪಥ್ಯಮಾಡಿ, ಹೋಟಲಿಗೆ ಬಂದು ಗಡದ್ದು ತಿಂದರೆ ಬ್ಲಡ್‌ಪ್ರಷರ್ ಹೆಚ್ಚಾಗುಲ್ಲವೇನಯ್ಯ! ವಯಸ್ಸಾದವನು. ಓದುವ ಮಕ್ಕಳು ಮೂರಿ ಇವೆ. ಬಾಯಿ ಚಪಲ ಕಟ್ಟಬೇಕಯ್ಯಾ" ಎಂದು ಸೇತುಮಾಧವ ಉಪದೇಶಿಸಿದ.

"ಹೇಗೂ ೫೦,೦೦೦ ಕ್ಕೆ ವಿಮಾಮಾಡಿಸಿದ್ದಿ. ಓದುವ ಮಕ್ಕಳು ಮರಿಗಳಿಗೆ ಅನುಕೂಲವಾಗಲಿ ಅಂತಲೇ ಮಾಡಿಸಿದ್ದು. ಆದರ ಯೋಚನೆ ಯಾಕೆ ಇಟ್ಕೊಕೋಬೇಕು? ಆ ಕಾರಣ ಹಾಗಿರಲಿ, ಹೋಟಲಿಗೆ ಬರದೆ ಇದ್ದರೆ, ಇನ್ನೆಲ್ಲಿ ತಿನ್ನಲು ಸಾಧ್ಯ! ಮನೇಲಿ ಅಸಾಧ್ಯ ಪಥ್ಯವಲ್ಲ" ಎಂದ ಭೀಮಯ್ಯ.

"ಅಷ್ಟು ಬಾಯಿ ಕಟ್ಕೊಕ್ಕೆ ಆಗದಿದ್ದರೆ, ಹೆಂಡತೀಗೆ ಹೇಳಿ ಮನೇಲೆ ಏನನ್ನಾರೂ ಹಗೂರಾಗಿ ಮಾಡಿಸಿಕೊಂಡು ತಿನ್ನಬಹುದಲ್ಲ!" ಎಂದ ಸೇತುಮಾಧವ.

"ಮನೇಲಿ ನನ್ನ ಹೆಂಡತಿಯ ಕೈವಾಡ ಈಗ ನಡೆಯುಲ್ಲಪ್ಪ" ಎಂದ ಭೀಮಯ್ಯ.

"ಅದ್ಯಾಕೋ!" ಎಂದ ಸೇತುಮಾಧವ.

"ನಮ್ಮತ್ತೆ ಖಾಯಿಲೆ ಅಂತ ನಮ್ಮನೆಗೆ ಬಂದು ಹದಿನೈದು ದಿನಗಳಾಯ್ತಪ್ಪ. ಆಕೆಗೆ ಬ್ಲಡ್ ಪ್ರಷರ್ ಅಂತೆ. ಉಪ್ಪಿಲ್ಲದ ಅಡಿಗೆ ಮಾಡ್ತಾ ಇದಾರೆ ಮನೇಲಿ. ಎರಡೆರಡು ಅಡಿಗೆ ಯಾಕೆ, ಬೇಕಾದರೆ ಮೇಲೆ ಉಪ್ಪು ಹಾಕಿಕೊಂಡರೆ ಆಯಿತು ಅಂತ ಅತ್ತೆಯ ವಾದ. ತಾಯಿಯ ಕತ್ತಿನಲ್ಲಿರುವ ೨ ಪಾವಿನ ಅಡ್ಡಿಗೆ, ತನಗೆ ಸಿಗಬಹುದು ಅನ್ನೋ ಆಸೆಯಿಂದ ಮಗಳು ಹೂ ಅಂತ ಒಪ್ಪಿಕೊಂಡಿದ್ದಾಳೆ.

ಇವರಿಬ್ಬರ ಮಧ್ಯೆ ಮನೆಯ ಊಟ, ನಾಯಿಗಳಿಗೂ ಬೇಡ. ಮೊನ್ನೆ ನಮ್ಮ ತಂದೆಯ ಶ್ರಾದ್ಧಮಾಡಿದಾಗ ಪಿಂಡ ಕಟ್ಟಿಟ್ಟರೆ, ಕಾಗೆಗಳು ಕೂಡ ಆ ಉಪ್ಪಿಲ್ಲದ ಪಿಂಡಾನ ಕುಕ್ಕಿನೋಡಲಿಲ್ಲ. ಅದಕ್ಕೇ ನೋಡಪ್ಪಾ! ಹೋಟಲಿಗೆ ಬರೋಹಾಗಾಯ್ತು. ಮುಖ್ಯ ಬ್ಲಡ್ ಪ್ರಷರ್ ಕೆಟ್ಟದು. ಬೇಗ ಕೊಂಡು ಹೋಗೋದಿಲ್ಲ." ಎಂದು ಭೀಮಯ್ಯ ಹೇಳುತ್ತಾ, ಇನ್ನೊಂದು ಪ್ಲೇಟ್ ಉಪ್ಪೇರಿಗೆ ಆರ್ಡರ್ ಕೊಟ್ಟ.

"ಪ್ರಸಾದ್"

ಕ್ರೀಡಾಭಿಮಾನಿಗೆ ಬಹಿರಂಗ ಪತ್ರ

'No saints are found in judgement seats'

—ಪಂಚತಂತ್ರ

ಗೆಳೆಯಾ,

ಇತ್ತೀಚೆಗೆ ಮುಂಬಯಿತಂಡವು (ಒಂದೇ ಸಮನೆ) ಎಂಟನೇ ಬಾರಿಗೆ ರಾಂಜಿ ಟ್ರೋಫಿಯನ್ನು ಗಳಿಸಿತೆಂಬ ಸುದ್ದಿಯನ್ನು ಕೇಳಿ, ನಿನ್ನ ಹೊಟ್ಟೆ, ತಲೆಗಳಲ್ಲಿ ಏನಾಯಿತೆಂಬುದನ್ನು ಊಹಿಸಬಲ್ಲೆ. ನನಗೂ ಹಾಗೇ ಆಯಿತು.

ಮುಂಬಯಿ ತಂಡವು ಫೈನಲ್ಸಿನಲ್ಲಿ ರಾಜಾಸ್ಥಾನವನ್ನೆದುರಿಸಿಕೊಂಡು ನನಗಿಂತಲೂ ಚೆನ್ನಾಗಿ ನಿನಗೇ ಗೊತ್ತು. ಏಕೆಂದರೆ ಹೋದ ವರ್ಷ ವೆಸ್ಟಿಂಡೀಸ್ ಮತ್ತು ಇಂಡಿಯನ್ ಕೋಲ್ಟ್ಸ್ ಪಂಗಡಗಳ ಪ್ರವಾಸಗರಿಗಾದ ದುಸ್ಥಿತಿಯನ್ನು ಕಂಡಮೇಲೆ ನಾನು ಅಂತರ್ಮುಖಿಯಾಗಿ, ಪೆರಿಮೇಸನ್ ಮತ್ತು ಜೇಮ್ಸ್ ಬಾಂಡ್ ಓದುತ್ತಿದ್ದೇನೆ.

ಆದರೂ ಇಂದು ಮೈಸೂರು ಪಂಗಡವು ರಾಂಜಿಟ್ರೋಫಿಯನ್ನು ಗೆಲ್ಲುವುದಿರಲಿ, ಅದಕ್ಕಾಗಿ ಫೈನಲ್ಸ್ ಆಡುವ ಸ್ಥಿತಿಯಲ್ಲಿ ಇಲ್ಲದಿರಲು ಕಾರಣವೇನು ಎಂಬುದನ್ನು ಚಿಂತಿಸಿದಂತೆ ನನ್ನ ತಲೆ ಗಿಮ್ಮನೆ ತಿರುಗುತ್ತಿದೆ.

ನಮ್ಮ ಆಟಗಾರರ ಅಸಮರ್ಥತೆ ಇದಕ್ಕೆ ಕಾರಣವೇ ? ಸಾಧ್ಯವಿಲ್ಲ. ದುಲೀಪ್ ಟ್ರೋಫಿ ದಕ್ಷಿಣದಲ್ಲಿದೆ. ಅದನ್ನು ಕೊಟ್ಟವರು ಯಾರು ? who but ಚಂದ್ರಶೇಖರ್ and ಪ್ರಸನ್ನ ? ನಮ್ಮ ಟೀಮಿನವರಿಗೆ ಡಜನ್‌ಗಟ್ಟಲೆ ಕ್ಯಾಚ್ ಬಿಡುವ ಅಭ್ಯಾಸವಿರಬಹುದು, ಆದರದು ಭಾರತೀಯ ಟೀಮುಗಳ ಆಜನ್ಮಸಿದ್ಧ ಹಕ್ಕು.

ಹೆಸರುಗಳ ಪ್ರಭಾವವಿರಬಹುದೇ ? ಅದನ್ನೂ ಒಪ್ಪಲಾರೆ. ಚಂದ್ರಶೇಖರ್ ! ಅದೊಂದು ಮಧುರಗಾನ. ಬಹಳ ಉದ್ದವಾಯಿತೆನ್ನಿಸಬಹುದು. ಆದರೆ 'ಚಂದ್ರ' ಎನ್ನುವುದು ಅಪ್ರಯೋಜಕ. ಶೇಖರ್ ! ಅದು ಸಿನಿಮಾನಾಯಕರಿಗೆ : ಮದ್ರಾಸ್ ಕೇರಳಗಳ ಆಟಗಾರರಿಗೆ ಸರಿಯಾದದ್ದು. ಪ್ರಸನ್ನ ? ಯಾರೂ ಈ ಹೆಸರು ಕೇಳಿ ಹೆದರದಿರಬಹುದು ಆದರೆ ನಾವು ಸುಪ್ರಸನ್ನರಾಗುತ್ತೇವೆ ಸುಬ್ರಹ್ಮಣ್ಯಂ ? ರಿಸರ್ಚ್ ಸ್ಕಾಲರ್ ಇರಬಹುದೇ ಎನ್ನಿಸುತ್ತದೆ. ಆದರೆ ಸೂರ್ಯವೀರ್ ಸಿಂಹಜಿ, ಹನುಮಂತ್ ಸಿಂಗ್, ವಾಡೇಕರ್ ಇತ್ಯಾದಿ ಕೇಳಿದ ಮೇಲೆ ಚಕಾರ ಎತ್ತುವ ಹಾಗಿಲ್ಲ.

ಆದುದರಿಂದ ನಮ್ಮ ಸೋಲಿಗೆ ಕಾರಣ ಬೇರಿನ್ನಾವುದೋ ಇರಬೇಕು. ನೀನು ಅದನ್ನು ಸರಿಯಾಗಿ ಊಹಿಸಿ ಪತ್ರಿಕಾ ಸಂಪಾದಕರಿಗೆ ಪತ್ರಗಳನ್ನು ಬರೆದಿರುವೆ. ನನ್ನ ಪಾಲಿಗೆ ಹೇಳುವುದಾದರೆ ನಮ್ಮ ಮೈಸೂರು ಟೀಮು ಹಿಂದೂ, ಇಂದೂ,

ಮುಂದೂ ಭಾರತದ ಅಗ್ರಗಣ್ಯ ಟೀಮು, ಆದರೆ ವಿಧಿವಿಲಾಸದಿಂದ ನಮಗೆ ರಾಂಜಿ ಟ್ರೋಫಿ ಸಿಕ್ಕಿಲ್ಲ.

ಭಾರಿ ಧನುವಿದ್ದೇನು, ತೋರದ ತೋಳಿನಲಿ ಫಲವೇನು, ಸಾರಥಿಯ ಬಲು ಹಿಲ್ಲದಿದ್ದೊಡೆ ? ನಾಗಭೂಷಣನೇ ಇದ್ದರೇನು, ಸುಬ್ರಹ್ಮಣ್ಯನೇ ನಾಯಕನಾದರೇನು, ಚಂದ್ರಶೇಖರನೇ ಎದುರಾಳಿಗಳನ್ನು ಎಗರಿಸುತ್ತಿದ್ದರೇನು, ಪ್ರಸನ್ನನು ವಿರೋಧಿ ಭಯಂಕರನಾದರೇನು ? ಅಂಪೈರಿನ ಒಲುಮೆ ಇಲ್ಲದನ್ನಕ್ಕ.

ರಾಜಾಸ್ಥಾನ – ಮೈಸೂರು ಪಂದ್ಯಕ್ಕೆ ಮುಂಬೈ ಅಂಪೈರುಗಳನ್ನು ಆರಿಸುವ ಔಚಿತ್ಯವನ್ನು ಪತ್ರಿಕೋದ್ಯೋಗಿಗಳೊಬ್ಬರು ಪ್ರಶ್ನಿಸಿದ್ದಾರೆ. ಔಚಿತ್ಯವನ್ನು ಆಧುನಿಕ ಜೀವನದ ಒಂದು ಅಂಗವೆಂದು ಯಾರೂ ಭಾವಿಸಿಲ್ಲ. ಗೆದ್ದುದೇ ಬಂತು—ಯುದ್ಧ ದಲ್ಲಿ ಎಲೆಕ್ಷನ್ನಿನಲ್ಲಿ, ಮ್ಯಾಚಿನಲ್ಲಿ, ಎಲ್ಲೆಡೆಗಳಲ್ಲಿ.

ಬಹು ಹಿಂದೆ ಮುಂಗಿಲಾಹಳ್ಳಿ ಡಿಸ್ಟ್ರಿಕ್ಟ್ ಜೂನಿಯರ್ ಟೂರ್ನಮೆಂಟಿನಲ್ಲಿ ಹೀಗಾಗಿತ್ತು :

ಟ್ಯಾಡ್ ಪೋಲ್ಸ್, ಹೆಂಟೆಗೊದ್ದಾಸ್ ಮೊದಲಾದ ಇಲೆವೆನ್ನುಗಳನ್ನು ಗೆದ್ದು ಕಪ್ಪಲ್ಲಾಟಾಸ್ ಇಲೆವೆನ್ ಫೈನಲ್ಸಿಗೆ ಬಂತು, ವಿಚಿತ್ರದುರ್ಗ ಚಿಕನ್ಸ್ ಮತ್ತು ಮಹಾರಾಷ್ಟ್ರ ವಾದಿ ಜೂನಿಯರ್ಸ್‌ಗಳಿಗೆ ಇನ್ನೊಂದು ಸೆಮಿಫೈನಲ್ಸ್ ನಡೆದಿತ್ತು. ಕಪ್ಪಲ್ಲಾಟಾಸ್ ಇಲೆವೆನ್ನಿನ ನಾಯಕ ವಸಂತ ತಲೆಕೆರೆದುಕೊಂಡು ಚಿಂತಾಕ್ರಾಂತನಾದ. ಮ, ವಾ. ಜೂನಿಯರ್ಸ್ ಗೆದ್ದರೆ ಕಪ್ಪಲ್ಲಾಟಾಸ್‌ಗೆ ಫೈನಲ್ಲಿನಲ್ಲಿ ಯಾವ ಆಶೆಯೂ ಇಲ್ಲವೆಂಬುದು ಅವನಿಗೆ 6 ವಿಕೆಟ್ಟುಗಳನ್ನು ಮೈನಸ್ ಮೂರು ರನ್ನಿಗೆ ಉರುಳಿಸ ಬಲ್ಲವನಾಗಿದ್ದ. ಆದರೆ ಬ್ಯಾಟಿಂಗು ಟಿಂಗ್–ಟಿಂಗ್. ಯಾವೂರ ದಾಸಯ್ಯನೂ ರನ್ ಹೊಡೆಯುವ ಸ್ಥಿತಿಯಲ್ಲಿರಲಿಲ್ಲ. ಮುಂಗಿಲಾಹಳ್ಳಿ ಕ್ರಿಕೆಟ್ ಕ್ಲಬ್ಬಿನ ರುದ್ರೇಶಿ, ನಾಗೇಶಿ, ಕೊಟ್ರ, ಸಿದಬಸ್ಯ ಮೊದಲಾದವರಿಗೂ ಚಿಂತೆ ಹತ್ತಿತು. ರೋಲಿಂಗ್ ಷೀಲ್ಡು ಮ. ವಾ. ಜೂನಿಯರ್ಸಿಗೆ ಹೋದರೆ ನಮ್ಮೂರಿನ ಮರ್ಯಾದೆ ಉಳಿದೀತೆ. ಕನ್ನಡ ಮಿತ್ರವೃಂದ, ಕನ್ನಡ ಯುವಜನ ಸಭೆ, ಕ. ಸಂಯುಕ್ತ ರಂಗಗಳಿಗೆ ಚಿಂತೆ. ಷೀಲ್ಡು ನಮ್ಮೂರಿನಲ್ಲಿ ಉಳಿಯದಿದ್ದರೆ ಕನ್ನಡ ಜನತೆ ಇದ್ದೇನು ಫಲ ! ಗೋವಾ, ಬೆಳಗಾವಿಗನು ನಮಗೆ ದಕ್ಕಿಯಾವೇ ?

ಆದರೆ ಮರುದಿನ ವಿಚಿತ್ರದುರ್ಗ ಚಿಕನ್ಸ್ ಮತ್ತು ಮ. ವಾ. ಜೂನಿಯರ್ಸ್ ಜೂನಿಯರ್ಸ್ ಮ್ಯಾಚಿನಲ್ಲಿ ಅಂಪೈರಾದ ಷಣ್ಮುಖಿ ನಮ್ಮೆಲ್ಲರ ಕಳವಳವನ್ನು ಸಮಾ ಧಾನ ಪಡಿಸಿದ. ಚಕ್ರವ್ಯೂಹದ ದ್ವಾರದಲ್ಲಿ ಸೈಂಧವ ನಿಂತಂತೆ ನಿಂತ ಅವನು ಮ. ವಾ. ಜ್ಯೂನಿಯರ್ಸ್ ಮಾಡಿದ ಯಾವ ಅಪೀಲನ್ನೂ ಪುರಸ್ಕರಿಸಲಿಲ್ಲ. ಷಣ್ಮುಖಿ ಅಂಪೈರ್ ಹೇಗಾದ ಎಂಬುದು ಬೇರೆ ರಹಸ್ಯ. ಅಂತೂ ಜೂನಿಯರ್ ಮಹಾರಾಷ್ಟ್ರ ವಾದಿಗಳು ಮಣ್ಣುಮುಕ್ಕಿದರು. ಆದುದರಿಂದ ಅಂಪೈರನ್ನು ಆರಿಸುವುದರಲ್ಲಿ ಕೈವಾಡ

ಛಾಂಪಿಯನ್ನುಗಳ ಅವಿಭಾಜ್ಯಗುಣ, ಇರಲಿ. ವಿಚಿತ್ರದುರ್ಗ ಚಿಕಿನ್ಸ್‌ಗಳನ್ನು ಫೈನಲ್ಸ್‌ನಲ್ಲಿ ವಸಂತ, ಪಲ್ಯ ಮಾಡಿದ,

ಚರಿತ್ರೆ ಪುನರಾವರ್ತನೆ ಹೊಂದುತ್ತದೆ' ಎಂಬುದನ್ನು ನೆನಪಿಟ್ಟುಕೋ,

ಹೋಗಲಿ, ಈ ಪ್ರಪಂಚದಲ್ಲಿ ಯಾವ ಅದ್ಯಾಯಕ್ಕೆಂದು ಅಳುವುದು ? ಗತ ಕಾಲು ಲಯಕಾಲವಾಯ್ತು. ಮುಂದಿನ ವರ್ಷವಾದರೂ ನಮ್ಮ ಮೈಸೂರಿನವರು ರಾಂಜಿ ಟ್ರೋಫಿ ಗೆಲ್ಲಲಿ ಎಂದು ಹಾರೈಸುವಾ.

ಮೈಸೂರಿನ ಪ್ರೇಕ್ಷಕರು 'bad' ಎಂದು ರಾಜಾಸ್ಥಾನದಲ್ಲಿ ಹೇಳಲಾಯಿತಂತೆ. ಆದರೆ ಮುಂಬಯಿಯ ಅಂಪೈರ್ಸ್ ಡೆಸಿಷನ್ನುಗಳು 'worse'. ನಡೆದ ಗಲಭೆಯಲ್ಲಿ ಅವರಿಗೆ ಗಾಯವಾಯಿತಂತೆ. ಹಿಂಸೆ ಕೆಟ್ಟದು. ನೀವೆಲ್ಲಾ ಹಾಗೆ ಫೀಲ್ಡಿಗೆ ನುಗ್ಗ ಬಾರದಾಗಿತ್ತು. ಅಲ್ಲಿ ಮಾಡಿದುದು ಸಾಲದೆ ಹೋಟೆಲಿಗೂ ಬೆನ್ನು ಹತ್ತಬಾರ ದಾಗಿತ್ತು. ಅವರು ರೈಲಿನಿಂದ ಇಳಿಯುವುದಕ್ಕೆ ಮೊದಲೇ. ರೈಲ್ವೆ ಸ್ಟೇಷನ್ನಿಗೆ ಹೋಗಿ ಪೂನಾ ಮೇಲಿನಲ್ಲಿ ಅವರನ್ನು ಪಾರ್ಸಲು ಮಾಡಲು ಯತ್ನಿಸುವುದು ಹೇಗೆ ತಪ್ಪೋ ಇದೂ ಹಾಗೆಯೇ.

ಮುಂಬಯಿಯವರು ಸುಲಭದಲ್ಲಿ ಹೇಗೆ ಈ ವರ್ಷ ಟ್ರೋಫಿಗಳಿಸಿದರೋ, ಮುಂದಿನ ವರ್ಷ ಅದೇ ಮಾರ್ಗದಿಂದ ನಾವೂ ಗಳಿಸಬೇಕು.

ಎಂದು ನಿನ್ನ

ಅ. ರಾ. ಸೇ.

ಭಾರತದಲ್ಲಿ ಹತ್ತಿ ಬೆಳೆ ನಿಲ್ಲಿಸಿ ಆಹಾರ ಬೆಳೆಯಲಿ, ಆಹಾರದ ಬದಲು ಹತ್ತಿ ಕಳಿಸೋಣ ಅಂತ ಅಮೇರಿಕಾದಲ್ಲಿ ಕೆಲವರ ಸಲಹೆಯಂತೆ.

—ಅಮೇರಿಕಾ ಹತ್ತಿ ತಂದು ಖದ್ದರ್ ಮಾಡಕ್ಕಾಗುತ್ತ್ಯೆ ? ಖದ್ದರ್ ಇಲ್ಲದೆ ಇದ್ದರೆ ಮುಂಬರೋದು ಹೇಗೆ ? " ಅಂತ ಅವರಿಗೆ ತಿಳಿದಿರಲಾರದು.

* * * *

ಕಿವೀಲಿ ಗುಗ್ಗೆ ತೆಗೆಸುಕ್ಕೆ "ಡಾಕ್ಟರ್ ಷಾಪಿಗೆ" ಹೋದರೆ, ಅಲ್ಲಿ ಮೂಗಿಗೆ ನೆಗಡಿ ಹಿಡಿಸಿ ಕಳಿಸಿದರು. (ಓದುಗರ ಪತ್ರ)

—ನೆಗಡಿ ಬಿಡಿಸಿಕೊಳ್ಳುಕ್ಕೆ ಬೇರೆ ಡಾಕ್ಟರ ಷಾಪಿಗೆ ಹೋಗಬೇಕು !! ಅದೇ ಸಭ್ಯವರ್ತನೆ.

* * * *

ಮನೋನಂದನ

ಆಳ ಮನಸ್ಸಿನಲ್ಲಿ ಹುದುಗಿರುವ ಆತಂಕ, ದುಗುಡು, ಭಯಗಳಿಂದ ದೇಹದಲ್ಲಿ ಕಾಣಿಸಿಕೊಳ್ಳುವ ವ್ಯಾಧಿಗಳ ವಿವರಗಳನ್ನು ಸುಲಭವಾಗಿ ತಿಳಿಸುವ ಹೊಸಮಾದರಿಯ ಪುಸ್ತಕ

ಇಂತಹ ಬೇನೆಗಳಿಂದ ನರಳುವ ರೋಗಿಗಳ ಕತೆಗಳು

ಮನಸ್ಸಿನ ಸಮಾಧಾನವನ್ನು ಸಾಧಿಸುವ ಹಲವಾರು ಮಾರ್ಗಗಳ ವಿವರಣೆಗಳು

ಡಾ|| ಎಂ. ಶಿವರಾಂ ಅವರಿಂದ

ಪುಟಗಳು ೩೫೦ ಬೆಲೆ ೬ ರೂಪಾಯಿ

★


– ಪ್ರತಿಗಳಿಗೆ –

"ವಿದೇಹ" 771, ಹದಿನೇಳನೇ ಕ್ರಾಸ್ ರಸ್ತೆ

ಮಲ್ಲೇಶ್ವರ, ಬೆಂಗಳೂರು–3

ಇವರಿಗೆ ಬರೆಯಿರಿ.

35 ವರ್ಷಗಳಿಂದ ನಡೆಸಿದ ಸಂಶೋಧನೆ ಮತ್ತು ಚಿಕಿತ್ಸಾನುಭವದ ಫಲದಿಂದ ಕಂಡು ಹಿಡಿದಿರುವ ನಮ್ಮ ಆಯುರ್ವೇದ ಔಷಧಿಗಳನ್ನು ಉಪಯೋಗಿಸಿ, ನಿಮ್ಮ ಆರೋಗ್ಯಭಾಗ್ಯವನ್ನು ಕಾಪಾಡಿಕೊಂಡು ವೃದ್ಧಿಪಡಿಸಿಕೊಳ್ಳಿರಿ.



" ನವಜೀವಕಲ್ಪಂ " :—ಕ್ಷೀಣತರಿಗೂ ದುರ್ಬಲರಿಗೂ ಅತ್ಯುತ್ತಮ ಶಕ್ತಿವರ್ಧಕ ಟಾನಿಕ್ ಕೇವಲ ಇಪ್ಪತ್ತು ದಿವಸ ನವಜೀವ ಕಲ್ಪಂ ಸೇವಿಸಿದರೆ ಆರೋಗ್ಯ ಉತ್ತಮವಾಗಿ ತೂಕ ಅಧಿಕವಾಗಿ ಶರೀರ ಸುಂದರವಾಗುತ್ತದೆ. ಬಲಹೀನ ಶರೀರ ಮತ್ತು ಪ್ರಕೃತಿದತ್ತವಾಗಿ ಕ್ಷೀಣವಾಗಿರುವವರು ಅಗ್ಗದ ಬೆಲೆಯ ಸಾವಿರಾರು ಔಷಧಿ ಸೇವಿಸಿ ನಿರಾಶರಾಗುವುದಕ್ಕಿಂತ, ಜಾಸ್ತಿ ಬೆಲೆಯ ನಮ್ಮ **" ನವಜೀವ ಕಲ್ಪಂ "** ಒಂದೇ ಬಾಟಲ್ ಸೇವಿಸಿ ದೇಹದಾರ್ಢ್ಯತೆಯನ್ನು ವೃದ್ಧಿಪಡಿಸಿಕೊಳ್ಳಿರಿ ಶರೀರದ ಶೋಷಣೆ ಕೆಮ್ಮು, ಎದೆನೋವು ಉಸಿರು ಕಟ್ಟುವುದು, ಶಬ್ದ ಬಂಧ, ಮಲಬದ್ಧತೆ ತಲೆ ಸುತ್ತುವುದು ಮುಂತಾದುವನ್ನು ನಿವಾರಿಸಿ ಆರೋಗ್ಯವನ್ನು ದೇಹದಾರ್ಢ್ಯತೆಯನ್ನು ವೃದ್ಧಿಪಡಿಸುವುದು ವಿದ್ಯಾರ್ಥಿಗಳು, ವರ್ತಕರು, ನ್ಯಾಯವಾದಿಗಳು, ಅಧ್ಯಾಪಕರು ಅಧಿಕಾರಿಗಳು, ಮುಂತಾದವರಿಗೆ:

ಇದು ಅತ್ಯುತ್ತಮವಾದ ಟಾನಿಕ್. ಬೆಲೆ 500 ಗ್ರಾಂ ಜಾಡಿ ಒಂದಕ್ಕೆ **10 ರೂ.**

" ಯುವಕಲ್ಪದ್ರಾವಂ " :—ಯುವಕರಿಗೆ ಉತ್ತಮ ಟಾನಿಕ್. ರಕ್ತವನ್ನು ಶುದ್ಧಿ ಮಾಡಿ ದೇಹದ ಉಷ್ಣತೆಯನ್ನು ನಿವಾರಿಸಿ ತಂಪನ್ನುಂಟುಮಾಡುವುದಲ್ಲದೆ, ಆರೋಗ್ಯವನ್ನೂ ಶಕ್ತಿಯನ್ನೂ ವೃದ್ಧಿಪಡಿಸುತ್ತದೆ. ಬೆಲೆ 250 ಎಂ ಎಲ್. ಬಾಟಲ್ ಒಂದಕ್ಕೆ **6-50 ರೂ.**

ನಿಮಗೆ ಸುಸ್ತು ಆಗಿದೆಯೋ ? ಹಾಗಿದ್ದರೆ ನಿರಾಶರಾಗಬೇಡಿ ನಮ್ಮೊಡನೆ ವ್ಯವಹರಿಸಿ ಪತ್ರವ್ಯವಹಾರವನ್ನು ರಹಸ್ಯವಾಗಿಡಲಾಗುವುದು ವಿ. ಪಿ. ಮೂಲಕ ಔಷಧಿಯನ್ನು ಕಳಿಸಬೇಕಾದರೆ ಆರ್ಡರಿನೊಂದಿಗೆ 5 ರೂ ಮನಿ ಆರ್ಡರ್ ಅಥವಾ ಪೋಸ್ಟಲ್ ಆರ್ಡರ್ ಮೂಲಕ ಕಳಿಸಿಕೊಡಿ. ವಿ. ಪಿ. ಮತ್ತು ಪ್ಯಾಕಿಂಗ್ ಚಾರ್ಜು ಪ್ರತ್ಯೇಕ.

ಎಲ್ಲಾ ಊರುಗಳಲ್ಲೂ ಸ್ಟಾಕಿಸ್ಟರು ಬೇಕಾಗಿದ್ದಾರೆ.

ಮ್ಯಾನೇಜರ್ :

ಶಂಕರ್ ಫಾರ್ಮಸಿ

ಭದ್ರಾವತಿ, ಮೈಸೂರು ಸ್ಟೇಟ್

Statement about ownership and other particulars about newspaper KORAVANJI to be published in the first Issue every year after last day of February.

FORM IV
(See Rule 8)

1.	Place of publication	Bangalore
2.	Periodicity of its publication	Monthly
3.	Printer's Name	B S Iyengar
	Nationality	Indian
	Address	Cottonpet, Bangalore
4.	Publisher's Name	M. SIVARAM
	Nationality	Indian
	Address	KORAVANJI Bangalore-9,
5.	Editor's Name	M. Sivaram
	Nationality	Indian
	Address	Koravanji Bangalore-9
6.	Names and addresses of individuals who own the newspaper and partners or shareholders holding more than one per cent of the total capital.	M. SIVARAM *Sole Proprietor*

I, M SIVARAM, hereby declare that the particulars given above are true to the best of my knowledge and belief.

Date 28-2-1966 (Sd) M. SIVARAM

★ ★ ★ ★



★ ★ ★ ★

Edited and Published by M. Sivaram
Printed by B. S Iyengar, Bangalore-2